ಅಚಲ ತಿಂಗಳ ಪತ್ರಿಕೆ

22

ಮಾರ್ಚ್ - 2004

ಒಳಗೇನಿದೆ

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ, ಬೆಂಗಳೂರು

ಅಚಲ

ಸಂಪುಟ - 19 ಸಂಚಿಕೆ : 3

ಸಂಪಾದಕ ಮಂಡಲಿ
ಎನ್. ಗಾಯತ್ರಿ
ನೇಮಿಚಂದ್ರ, ದೇವಿ,
ಶಾಂತಾನಾಗರಾಜ್
ಹೆಚ್. ಎನ್: ಗೀತಾ
ಹೇಮಲತಾ ಮಹಿಷಿ

ಪ್ರಕಾಶಕರು
ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ,
ಬೆಂಗಳೂರು

ಚಂದಾ ಹಣವನ್ನು ಚೆಕ್‌ನಲ್ಲಿ ಕಳುಹಿಸುವವರು ರೂ. 10 ಬ್ಯಾಂಕ್ ಕಮೀಷನ್ ಸೇರಿಸಿ ಕಳುಹಿಸಬೇಕು. ಎಂ. ಓ. ಫಾರ್ಮಿನ ಕೊನೆಯ ಭಾಗದಲ್ಲಿ ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ನಮೂದಿಸಬೇಕು. ಬದಲಾದ ವಿಳಾಸವನ್ನು ದಯವಿಟ್ಟು ಬರೆದು ತಿಳಿಸಿ.

Achala - Edited by
Dr. N. Gayathri

Published by
Dr. G. Ramakrishna on behalf of Jagruthi Mahila Adhyayana Kendra

Printed at
Lipi Mudrana
Bangalore - 560 004

ಆತ್ಮೀಯರೆ,

ಕಳೆದ 19 ವರ್ಷಗಳಿಂದಲೂ ತಾವುಗಳು ಪ್ರೀತಿ, ಅಭಿಮಾನದಿಂದ ಅಚಲ ಪತ್ರಿಕೆಯನ್ನು ನಿಮ್ಮದಾಗಿಸಿಕೊಂಡು ಪೋಷಿಸುತ್ತಾ ಬಂದಿರುತ್ತೀರಿ. ಮಹಿಳಾ ಚಳುವಳಿಯ ಮತ್ತು ಸಂಶೋಧನೆಯ ಕ್ಷೇತ್ರದಲ್ಲಿ ಇನ್ನೂ ಬೆಟ್ಟದಷ್ಟು ಕೆಲಸವಾಗಬೇಕಿದೆ. ಈ ಮಹತ್ತರ ಕಾರ್ಯದಲ್ಲಿ ನಾವೆಲ್ಲರೂ ಒಟ್ಟಾಗಿ ಶ್ರಮಿಸಬೇಕಿದೆ. ನೀವೂ ಅಚಲ ಪತ್ರಿಕೆಯನ್ನು ನಿಮ್ಮ ವಿಚಾರಗಳ ವೇದಿಕೆಯನ್ನಾಗಿ ಮಾಡಿಕೊಳ್ಳಿ ಮತ್ತು ಪತ್ರಿಕೆಯ ಪ್ರಸಾರವನ್ನು ಹೆಚ್ಚಿಸುವಲ್ಲಿ ನೆರವಾಗಿ.

ಯಾವುದೇ ವಿವರಗಳನ್ನು ಬರೆಯದ ಚಂದಾಹಣವು ಹಲವಾರು ಎಂ.ಓ ಗಳಲ್ಲಿ ನಮಗೆ ತಲುಪಿದೆ. ಚಂದಾದಾರರು ದಯವಿಟ್ಟು ಎಂ.ಓ ಫಾರ್ಮಿನ ಹಿಂಭಾಗದಲ್ಲಿ ವಿಳಾಸವನ್ನು ಬರೆಯಿರಿ.

ಅಚಲದ ಚಂದಾ ಬದಲಾಗಿದೆ

ವಾರ್ಷಿಕ ಚಂದಾ - ರೂ. 50/- (ವ್ಯಕ್ತಿಗಳಿಗೆ)
ರೂ. 100/- (ಸಂಸ್ಥೆಗಳಿಗೆ)
ಅಜೀವ ಚಂದಾ - ರೂ. 300/- (ವ್ಯಕ್ತಿಗಳಿಗೆ)
ರೂ. 400/- (ಸಂಸ್ಥೆಗಳಿಗೆ)

ಅಚಲ ವಿಳಾಸ

108, ಸ್ಕೈಲೈನ್ ಸುರಭಿ, 14-ಪಿ, ವಿದ್ಯಾಪೀಠ ರಸ್ತೆ
ಬನಶಂಕರಿ 3ನೇ ಹಂತ, ಬೆಂಗಳೂರು - 560 085

ಸಂಪಾದಕೀಯ

ಪ್ರಭುತ್ವದ ಕರಿನೆರಳಿನಲ್ಲಿ ಲಿಂಗತಾರತಮ್ಯ

ಜಮ್ಮು ಮತ್ತು ಕಾಶ್ಮೀರದ ಶಾಶ್ವತ ನಿವಾಸಿ ಮಸೂದೆ (ಅನರ್ಹತಾ ಮಸೂದೆ) 2004, ಇತ್ತೀಚೆಗೆ ಶಾಸನ ಸಭೆಯಲ್ಲಿ ಮಂಡಿತವಾದಾಗ ಸಾಕಷ್ಟು ವಿವಾದವನ್ನು ಆ ರಾಜ್ಯದೊಳಗೂ ಮತ್ತು ಹೊರಗೂ ಉಂಟು ಮಾಡಿದೆ. ಆ ರಾಜ್ಯದ ಮಹಿಳೆಯರು ಹೊರರಾಜ್ಯದವರನ್ನು ಮದುವೆಯಾದರೆ ಆಸ್ತಿಯ ಒಡೆತನದ ಹಕ್ಕನ್ನು, ವಂಶಪಾರಂಪರ್ಯವಾಗಿ ಆಸ್ತಿಯನ್ನು ಅನುಭವಿಸುವ ಮತ್ತು ಉದ್ಯೋಗದ ಹಕ್ಕನು ಕಳೆದುಕೊಳ್ಳುತ್ತಾರೆ. ಈ ಮಸೂದೆಯನ್ನು ಅಸೆಂಬ್ಲಿಯಲ್ಲಿ ಹಿರಿಯ ಪಿಡಿಪಿ ನಾಯಕರೂ ಕಾನೂನು ಮಂತ್ರಿಯೂ ಆಗಿರುವ ಮುಝಫರ್ ಹುಸೇನ್ ಬೇಗ್ ಫೆಬ್ರವರಿಯಲ್ಲಿ ಮಂಡಿಸಿದಾಗ ಅದು ಇಷ್ಟೊಂದು ವಿವಾದದ ಅಲೆಗಳನ್ನು ಸೃಷ್ಟಿಸುತ್ತದೆಂದು ಯಾರೂ ಊಹಿಸಿರಲಿಲ್ಲ. ಈಗ ಲೋಕಸಭಾ ಚುನಾವಣೆಗಳು ಹತ್ತಿರ ಬರುತ್ತಿರುವಾಗ ಎಲ್ಲ ವಿಷಯಗಳೂ ಚುನಾವಣೆಯ ಭೂತ ಕನ್ನಡಿಯಲ್ಲಿ ಅಗಾಧವಾಗಿ ಕಾಣುತ್ತವೆ.

ಅಸೆಂಬ್ಲಿಯಲ್ಲಿ ಈ ಮಸೂದೆಯು ಮಂಡಿತವಾದಾಗ ಎಲ್ಲಾ ರಾಜಕೀಯ ಪಕ್ಷಗಳು ಅಪಸ್ವರವಿಲ್ಲದೆ ಈ ಮಸೂದೆಯನ್ನು ಬೆಂಬಲಿಸಿದವು. ಯಾವುದೇ ಹೊಸ ಕಾನೂನು ರಚಿತವಾಗುತ್ತಿದೆಯೆಂದಾಗಲೀ, ಅದರ ಪರಿಣಾಮವಾಗಲೀ ಯಾರಿಗೂ ಸ್ಪಷ್ಟವಾಗಿ ಮನವರಿಕೆಯಾಗಿರಲಿಲ್ಲ. ಇದಕ್ಕೆ ಮುಖ್ಯ ಕಾರಣ 1927ರಿಂದಲೂ ಈ ಕಾನೂನು ಬೇರೆ ಸ್ವರೂಪದಲ್ಲಿ ಜಾರಿಯಲ್ಲಿದ್ದೇ ಇತ್ತು. 1927ರಲ್ಲಿ ಆಗ ಆಳುತ್ತಿದ್ದ ಮಹಾರಾಜಾ ಹರಿಸಿಂಗ್‌ನ್ ಈ ಕಾನೂನನ್ನು ಮಾಡಿದನು. ಆಸ್ತಿಯ ಸಂಬಂಧವಾಗಿ ಮತ್ತು ಸಂವಿಧಾನದ 370ನೇ ಪರಿಚ್ಛೇದವೆರಡನ್ನೂ ಈ ಕಾನೂನು ರಕ್ಷಿಸಿತ್ತು. ಸುಮಾರು 77 ವರ್ಷಗಳ ಕಾಲ ಆ ರಾಜ್ಯದಲ್ಲಿ ಈ ಕಾನೂನು ಚಾಲ್ತಿಯಲ್ಲಿತ್ತು. ಮಾಜಿ ಪ್ರಧಾನಿಯ ಮೊಮ್ಮಗಳೊಬ್ಬಳು ಹೊರ ರಾಜ್ಯದವರನ್ನು ಮದುವೆಯಾಗಿ ತನ್ನ ಆಸ್ತಿಯ ಹಕ್ಕನ್ನು ಕಳೆದುಕೊಳ್ಳಬೇಕಾಗಿ ಬಂದಾಗ ಜಮ್ಮು ಕಾಶ್ಮೀರದ ಹೈಕೋರ್ಟಿನಲ್ಲಿ ಈ ಸಂಬಂಧವಾಗಿ ಮೊಕದ್ದಮೆ ಹೂಡಿದ ಘಟನೆ ನಡೆದಿದೆ. ಅದಾದನಂತರ ಒಂದೆರಡು ಪ್ರಕರಣಗಳು ಹೈಕೋರ್ಟಿನಲ್ಲಿ ಈ ಸಂಬಂಧವಾಗಿ ಸಂವಿಧಾನದತ್ತ ಮಹಿಳಾ ಹಕ್ಕುಗಳನ್ನು ಉಳಿಸಿಕೊಳ್ಳಲು ಹೋರಾಡಿದ್ದು, ಆಗ ಜಮ್ಮು ಮತ್ತು ಕಾಶ್ಮೀರದ ರಾಜ್ಯ ಹೈಕೋರ್ಟ್. 2002ರ ಅಕ್ಟೋಬರ್ 2ರಂದು ಈ ಆಜ್ಞೆಗೆ ತಡೆತಂದಿತು. ಜೊತೆಗೆ ರಾಜ್ಯ ಹೈಕೋರ್ಟ್ ಸೆಕ್ಷನ್ 8ರ ಅನ್ವಯ ಶಾಸನ ಸಭೆಯು ಇಂತಹದೊಂದು ಕಾಯ್ದೆಯನ್ನು ಮಾಡಲು ಅವಕಾಶವಿದೆ ಎಂಬ ಸಲಹೆಯನ್ನು ಸೂಚಿಸಿತ್ತು. ಆದರೆ ರಾಜ್ಯ ಸರ್ಕಾರ ಸುಮ್ಮನಿರದೆ ಒಂದು ಕಡೆ ಹೈಕೋರ್ಟಿನ ತೀರ್ಪನ್ನು ಪ್ರಶ್ನಿಸಿ ಸುಪ್ರೀಂಕೋರ್ಟಿಗೆ ಅಪೀಲು ಹಾಕಿತು. ಮಧ್ಯದಲ್ಲಿ ತರಾತುರಿಯಿಂದ ರಾಜ್ಯ ವಿಧಾನಸಭೆಯಲ್ಲಿ ಜಮ್ಮು ಮತ್ತು ಕಾಶ್ಮೀರ ಶಾಶ್ವತ ನಿವಾಸಿ ಮಸೂದೆ (ಅನರ್ಹತಾ ಮಸೂದೆ) 2004ಯನ್ನು ಮಂಡಿಸಿ ಸದನದ ಒಪ್ಪಿಗೆ ಪಡೆಯುವ ಹುನ್ನಾರ ನಡೆಸಿತು. ಸಭೆಯಲ್ಲಿ ಈ ಮಸೂದೆ ಮಂಡಿತವಾದ ಕೇವಲ ಆರು ನಿಮಿಷಗಳಲ್ಲಿ ಎಲ್ಲ ರಾಜಕೀಯ ಪಕ್ಷಗಳ ಅಂಗೀಕಾರ ಮುದ್ರೆಯೊಂದಿಗೆ ಮಸೂದೆ ಅಂಗೀಕಾರವಾಯಿತು.

ಈ ಮಸೂದೆ ಮಾಧ್ಯಮದಲ್ಲಿ ಸುದ್ದಿಯಾದದ್ದೇ ತಡ ಶಾಸನಸಭೆಯಲ್ಲಿ ಒಪ್ಪಿಕೊಂಡ ರಾಜಕೀಯ ಪಕ್ಷಗಳು ನಿಧಾನವಾಗಿ ಮಸೂದೆಯ ವಿರುದ್ಧ ಮಾತನಾಡಲು ಆರಂಭಿಸಿವೆ. ಚುನಾವಣೆಯ ಸಂದರ್ಭವೆಂದರೆ 'ಸಾಮಾಜಿಕ ನ್ಯಾಯ'ದ ಬಗ್ಗೆ ಎಲ್ಲರೂ ಕಳಕಳಿ ವ್ಯಕ್ತಪಡಿಸಬೇಕಾದದ್ದು ಇಂದಿನ ಫ್ಯಾಷನ್ ಆಗಿದೆ. ಅದರಲ್ಲೂ ದೇಶದ ಬಹುದೊಡ್ಡ ಮತಬ್ಯಾಂಕಿನ ಸಮುದಾಯವಾದ ಮಹಿಳೆಯರ ಹಿತವನ್ನು ಅಲಕ್ಷಿಸುವುದು ಸಾಧ್ಯವೆ!

ಜಮ್ಮು ಕಾಶ್ಮೀರದ ಈ ಅನರ್ಹತಾ ಮಸೂದೆ ರಾಜಕೀಯವಾಗಿ ಏನೇ ಸ್ವರೂಪವನ್ನು ಪಡೆದುಕೊಂಡರೂ ಇಂದಿನ ಸಂದರ್ಭದಲ್ಲಿ ಕೆಲವೊಂದು ಮೂಲಭೂತ ಪ್ರಶ್ನೆಗಳನ್ನು ನಮ್ಮ ಮುಂದಿಡುತ್ತದೆ. ಹೊರರಾಜ್ಯದವರನ್ನು ಮದುವೆಯಾಗದಿರುವ ನಿರ್ಬಂಧ ಮಹಿಳೆಯರಿಗೆ ಮಾತ್ರ ಏಕೆ? ತಮ್ಮ ಒಳಗುಂಪುಗಳಲ್ಲೇ ಮದುವೆಯಾಗಬೇಕೆಂಬ ನಿರ್ಬಂಧದಿಂದ ಇಲ್ಲಿನ ಗಂಡುಹೆಣ್ಣುಗಳಿಬ್ಬರ ಮಾನಸಿಕ, ಭೌತಿಕ ವಿಶ್ವವನ್ನು ಕಿರಿದುಗೊಳಿಸಿಕೊಂಡಂತಾಗುವುದಿಲ್ಲವೆ? ನಾಗರೀಕತೆ ಮತ್ತು ಸಂಸ್ಕೃತಿಯ ದೃಷ್ಟಿಯಿಂದಲೂ ಇದನ್ನು ಗಂಭೀರವಾಗಿ ಯೋಚಿಸಬೇಕಾಗಿದೆ. ನಮ್ಮ ದೇಶದ ಎಲ್ಲ ರಾಜ್ಯಗಳಿಗಿಂತ ಜಮ್ಮು ಮತ್ತು ಕಾಶ್ಮೀರ ಎದುರಿಸುತ್ತಿರುವ ಸಮಸ್ಯೆ ವಿಭಿನ್ನವಾದದ್ದು ಮತ್ತು ಗಂಭೀರಸ್ವರೂಪದ್ದು ಎಂದು ಒಪ್ಪಿಕೊಂಡರೂ ಕೂಡ ಮಹಿಳೆಯರಿಂದ ಅಷ್ಟು ದೊಡ್ಡ ತ್ಯಾಗವನ್ನು ನಿರೀಕ್ಷಿಸುವುದು ಮಾನವೀಯತೆಯಲ್ಲ.

ಕೊನೆಯದಾಗಿ, ಕಾಶ್ಮೀರಿ ಮಸೂದೆ ಸ್ಪಷ್ಟಪಡಿಸುತ್ತಿರುವ ಸಂಗತಿಯೆಂದರೆ, ಇಲ್ಲಿಯವರೆಗೂ ಧರ್ಮ, ಸಮಾಜ, ಕುಟುಂಬ, ಕಾನೂನು ಎಲ್ಲವೂ ಮಹಿಳೆಯರನ್ನು ಶೋಷಿಸುವ ವ್ಯವಸ್ಥೆಗಳಾಗಿದ್ದವು. ಈ ಸಾಲಿನಲ್ಲಿ ಈಗ ಪ್ರಭುತ್ವವೂ ತನ್ನ ಕರಿನೆರಳನ್ನು ಚಾಚಿ ಕ್ರೂರ ನಖಗಳೊಂದಿಗೆ ಸಿದ್ಧವಾಗಿ ನಿಂತಿದೆ. ಪ್ರಭುತ್ವದೊಂದಿಗಿನ ಈ ಹೋರಾಟದಲ್ಲಿ ಮಹಿಳೆ ಹೆಚ್ಚು ಸಂಘಟಿತಳಾಗಿ ಬುದ್ಧಿವಂತಿಕೆಯಿಂದ ವರ್ತಿಸಬೇಕಾಗಿದೆ.

- ಎನ್. ಗಾಯತ್ರಿ

ಉದ್ಯೋಗ ಸಂಬಂಧಿ ಅಭಿವೃದ್ಧಿ ಯೋಜನೆಗಳು ಮತ್ತು ಮಹಿಳೆ-ಒಂದು ಸಮಕಾಲೀನ ಚಿಂತನೆ

- ಕಾ. ಗು. ಗಾಯಿತ್ರಿದೇವಿ

ಅಭಿವೃದ್ಧಿಯ ಪ್ರಮುಖ ಗುರಿ ಎಂದರೆ ಜನರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳಲ್ಲಿ ಸುಧಾರಣೆ ತಂದು, ಕ್ರಮೇಣ ಸಮಾಜದಲ್ಲಿ ಬಡತನವನ್ನು ನಿರ್ಮೂಲನೆ ಮಾಡುವುದೇ ಆಗಿದೆ. ಹಲವು ದಶಕಗಳ ಹಿಂದೆ, ಅನೇಕ ರಾಷ್ಟ್ರಗಳಲ್ಲಿ ಆರ್ಥಿಕ ಮತ್ತು ಸಾಮಾಜಿಕ ಸುಧಾರಣೆಗಾಗಿ ಯೋಜನೆಗಳನ್ನು ರೂಪಿಸಿದಾಗ ಸರಕಾರಕ್ಕಿದ್ದ ಆಲೋಚನೆ ಎಂದರೆ, ಉತ್ಪಾದನಾ ರಂಗ, ಉದ್ಯೋಗ, ಸಮಾಜಕಲ್ಯಾಣ / ಸುಧಾರಣೆ, ಸೇವೆಗಳು ಮತ್ತು ಭೂ ಸುಧಾರಣಾ ಕಾರ್ಯಕ್ರಮಗಳ ಪ್ರಭಾವದಿಂದಾಗಿ ತಾನೇ ತಾನಾಗಿ ಜನರ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿ ಸುಧಾರಿಸುತ್ತದೆ, ಸಮಾಜದಲ್ಲಿನ ಅಸಮಾನತೆ ಮತ್ತು ಬಡತನವನ್ನು ತೊಡೆದು ಹಾಕುವಲ್ಲಿ ಯಶಸ್ವಿಯಾಗುತ್ತದೆ ಎಂದು. ಇಂತಹ ಆಲೋಚನೆಗಳು ಯಾವ ಅಂದಾಜಿನ ಆಧಾರಿತವಾಗಿದ್ದುವೆಂದರೆ, ಯಾವುದೇ ಸಮಾಜದ ಸಾಮಾನ್ಯ ಆರ್ಥಿಕ ಸುಧಾರಣೆಯೊಡನೆ, ಬಡಜನರ ಉದ್ಧಾರವೂ ತಾನೇ ತಾನಾಗಿ ಯಾವ ಪ್ರಚೋದನೆಯೂ ಇಲ್ಲದಂತೆ ಆಗುತ್ತದೆ ಎಂಬುದರ ಮೇಲೆ.

ಆದರೆ ಕ್ರಮೇಣ ಸರಕಾರದ ಗಮನ ಮಂದಗತಿಯಲ್ಲಿ ಸಾಗಿದ ಅಭಿವೃದ್ಧಿ ಪಥದ ಕಡೆ ತಿರುಗಿದಾಗ ಗೋಚರವಾದ ಸತ್ಯವೆಂದರೆ, ಬೆಳವಣಿಗೆ ಪರವಾದ ಯಾವುದೇ ಯೋಜನೆಗಳೂ ಸಹ, ನೈಜದಲ್ಲಿ ಬಡತನ ವಿಮೋಚನಾ ಸ್ಥಿತಿಯನ್ನು ಉಂಟುಮಾಡಲಾರವು (ತಾವೇ ತಾವಾಗಿ) ಎಂದು, ಹೀಗಾಗಿ, ಪರ್ಯಾಯ ವ್ಯವಸ್ಥೆಗಾಗಿ ಹುಡುಕಾಟ ಆರಂಭವಾಗಿ, "ಬೆಳವಣಿಗೆಯಿಂದ ಅಭಿವೃದ್ಧಿ" ಎಂಬ ಸುತ್ತು ದಾರಿ ಬಿಟ್ಟು, ಬಡತನವನ್ನೇ ಉದ್ದೇಶವಾಗಿಟ್ಟುಕೊಂಡು, ಅದನ್ನು ತೊಡೆದು ಹಾಕಲೋಸುಗವೇ ವಿಶಿಷ್ಟವಾದ ಕಾರ್ಯಕ್ರಮಗಳ ರಚನೆ ಮತ್ತು ಅನುಷ್ಠಾನ ಕಾರ್ಯಕ್ರಮಗಳು ಮೊದಲುಗೊಂಡವು. ಅಂದರೆ, ಜನಹಿತಕ್ಕಿರುವ, ಹಾಗೆಂದು ಗುರುತಿಸಿಕೊಂಡಿರುವ ಗುಂಪುಗಳು ಅಭಿವೃದ್ಧಿ ಮತ್ತು ಅತ್ಯವಶ್ಯಕ ಅನುಕೂಲಗಳನ್ನು ಒದಗಿಸುವುದಕ್ಕಾಗಿ ವಿಶೇಷ, ಪ್ರತ್ಯೇಕ ಕಾರ್ಯಕ್ರಮಗಳು ಸಹ ರೂಪುಗೊಂಡವು. ತಾವಿರುವ ಅಸಮಾನ ಪರಿಸ್ಥಿತಿಯಲ್ಲಿ ತಮ್ಮ ಸಂಕಷ್ಟಗಳನ್ನು ಸರಿಯಾಗಿ ಗುರುತಿಸಿ ತಮಗೆ ಬೇಕಾದ ಸವಲತ್ತುಗಳನ್ನು ನೀಡುವ ವ್ಯವಸ್ಥೆಯನ್ನು ಬಡಜನತೆ ಆಶಾಭಾವನೆಯಿಂದ ಬರಮಾಡಿಕೊಂಡಿತು.

ಭಾರತದಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳು ಕಳೆದ ಮೂರು ದಶಕಗಳಿಂದ ಇಂತಹ ಬಡತನ ನಿರ್ಮೂಲನಾ ಕಾರ್ಯಕ್ರಮಗಳನ್ನು 'ಕುಟುಂಬ' ಮತ್ತು 'ವ್ಯಕ್ತಿ' ಎಂಬ ಎರಡನ್ನು ಮೂಲ ಬಿಂದುವನ್ನಾಗಿಸಿಕೊಂಡು ಜಾರಿಯಲ್ಲಿವೆ. ಸ್ವಾತಂತ್ರ್ಯನಂತರ ಜಾರಿಗೆ ಬಂದ ಪಂಚವಾರ್ಷಿಕ ಯೋಜನೆಗಳು ಒಂದು ಕಡೆಯಾದರೆ, ನಂತರ ಬಂದಂತಹ ಅಭಿವೃದ್ಧಿ ಪರ ಕಾರ್ಯಕ್ರಮಗಳಾದ ಗ್ರಾಮೀಣ ಭೂರಹಿತರಾಗಿ ಉದ್ಯೋಗ ಭರವಸೆ ಯೋಜನೆ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಕಾರ್ಯಕ್ರಮ (ಕೂಲಿಗಾಗಿ ಕಾಳು ಕಾರ್ಯಕ್ರಮ), ಸಮಗ್ರ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮ ಇತ್ಯಾದಿ ಮತ್ತೊಂದು ಕಡೆ ಜಾರಿಗೊಂಡವು. ಇವುಗಳು ಮುಖ್ಯವಾಗಿ ದೇಶದ ಎಲ್ಲಾ ಕಡೆ ಅನ್ವಯಿಸಿದ್ದು ಗಮನಾರ್ಹವಾದ ಪ್ರಗತಿಯನ್ನು ಸಹ ಸಾಧಿಸಿವೆ. ಈ ಕಾರ್ಯಕ್ರಮಗಳು ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ ಜನರ ಸ್ಥಿತಿಯನ್ನು ಸುಧಾರಿಸಲೋಸುಗವೇ ರೂಪಿತವಾಗಿದ್ದುವು. ಐ.ಆರ್.ಡಿ.ಪಿ.ಯಂತಹ ಕಾರ್ಯಕ್ರಮಗಳಂತೂ ಆಯ್ದ ಅತಿ ಬಡ ಕುಟುಂಬಗಳಿಗೆ ಉತ್ಪಾದಕಾ ವಸ್ತುಗಳನ್ನು ಒದಗಿಸಿ ಅವುಗಳ ಜೀವನ ಮಟ್ಟವನ್ನು ಮೇಲೆತ್ತುವಲ್ಲಿ ಫಲಕಾರಿಯಾದುವು.

ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಮಹಿಳೆ

ಈ ಮೇಲೆ ನಿವೇದಿಸಿರುವ ಮತ್ತು ಇನ್ನೂ ಅನೇಕ ಕಾರ್ಯಕ್ರಮಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಗೋಚರವಾಗುವ ಒಂದು ಮುಖ್ಯ ಸಂಗತಿ ಎಂದರೆ, ಇವೆಲ್ಲವುಗಳಲ್ಲಿ ಮಹಿಳೆಯರನ್ನು ಅದರಲ್ಲೂ ಗ್ರಾಮೀಣ ಮಹಿಳೆಯರನ್ನು ಕಡೆಗಣಿಸಲಾಗಿದೆ ಎಂಬುದು. ನಮಗೆ ಈಗಾಗಲೇ ತಿಳಿದಿರುವಂತೆ, ಮಹಿಳೆಯರು ಯಾವುದೇ ಸಮಾಜದ ಜನಸಂಖ್ಯೆಯ ಅರ್ಧದಷ್ಟಿದ್ದು ಆ ಸಮಾಜದಲ್ಲಿ ದೊರೆಯುವ ಮಾನವ ಸಂಪನ್ಮೂಲದ ಅರ್ಧದಷ್ಟಿದ್ದಾರೆ. ಇಂತಹ ಸಂಪನ್ಮೂಲವನ್ನು ಸರಿಯಾದ ಉಪಯೋಗಕ್ಕೆ ಬಳಸದೆ, ಅವರನ್ನು ನಿರ್ಲಕ್ಷಿಸಿ, ಅಭಿವೃದ್ಧಿ ಯೋಜನೆಗಳಿಂದ ವಂಚಿತರನ್ನಾಗಿ ಮಾಡಿರುವುದು ಬಹಳ ಅನ್ಯಾಯ ಹಾಗೂ ಸಂವಿಧಾನಬಾಹಿರ. ಭಾರತದ ಸಂವಿಧಾನವು ಎಲ್ಲಾ ಪ್ರಜೆಗಳಿಗೂ ಲಿಂಗ, ಜಾತಿ, ಭಾಷೆ, ಧರ್ಮ, ಪ್ರಾಂತ್ಯ ಮುಂತಾದ ಅಂತರಗಳಿಂದ ಹೊರತಾದ ಸಮಾನತೆಯನ್ನೇ

ಘೋಷಿಸಿರುವಾಗ ಹೀಗೆ ಮಹಿಳಾ ಹಿತವನ್ನು ಕಡೆಗಣಿಸಿರುವಂತಹ ಕಾರ್ಯಕ್ರಮಗಳು ಬಹಳ ವಿಷಾದವನ್ನೇ ಉಂಟುಮಾಡುತ್ತವಲ್ಲವೇ?

ಮಹಿಳಾಭಿವೃದ್ಧಿ ಏಕೆ, ಹೇಗೆ?

ಯಾವುದೇ ಸಮಾಜದಲ್ಲಾಗಲಿ, ಅಲ್ಲಿನ ಅಭಿವೃದ್ಧಿಯ ಮುಖ್ಯ ಸೂಚಕವೆಂದರೆ, ಅದರ ಮಹಿಳೆಯರ ಸ್ಥಾನಮಾನ. ಸಮಾಜದ ಅರ್ಧ ಜನಸಂಖ್ಯೆಯಷ್ಟಿರುವ ಮಹಿಳೆಯರು ಅದರ ಮುಖ್ಯ / ಅಮೂಲ್ಯ ಮಾನವ ಸಂಪನ್ಮೂಲ. ದೇಶದ ಸರ್ವಾಂಗೀಣ ಪ್ರಗತಿಗಾಗಿ, ಗೃಹಿಣಿಯರಾಗಿ, ಭಾವಿ ಪ್ರಜೆಗಳನ್ನು ಹೊತ್ತು, ಹೆತ್ತು, ಬೆಳೆಸುವ ತಾಯಂದಿರಾಗಿ, ಕಾರ್ಮಿಕರಾಗಿ ಮಹಿಳೆಯರು ಸಲ್ಲಿಸುತ್ತಿರುವ ಸೇವೆ ಅತಿದೊಡ್ಡದು ಮತ್ತು ಅಮೋಘ. ಆದ್ದರಿಂದಲೇ ಅವರನ್ನು, ಅವರ ಶಕ್ತಿಯನ್ನು ಗುರುತಿಸಿ, ಅಭಿವೃದ್ಧಿ ಪಥದಲ್ಲಿ ಹಾಕಿಕೊಂಡು ಮುಂದುವರೆಯುವ ಅವಶ್ಯಕತೆ ಇದೆ. ಇದರಲ್ಲಿ ಬರಿಯ ಅವರ ಪ್ರಗತಿ ಮಾತ್ರವಲ್ಲದೆ, ದೇಶದ ಪ್ರಗತಿ ಸಹ ಅಡಕವಾಗಿದೆ.

ಪ್ರಪಂಚದ ಒಟ್ಟು ಸ್ತ್ರೀಯರಲ್ಲಿ ಶೇಕಡಾ 75ರಷ್ಟು ಮಂದಿ ಅಭಿವೃದ್ಧಿ ಹೊಂದುತ್ತಿರುವ ಅಥವಾ ಅಭಿವೃದ್ಧಿಯಾಗದ ದೇಶಗಳಲ್ಲಿ ವಾಸಿಸಿದ್ದಾರೆ. ಮೊದಲ ಗುಂಪಿಗೆ (ಅಭಿವೃದ್ಧಿ ಹೊಂದುತ್ತಿರವ ದೇಶಗಳ) ಹೋಲಿಸಿದರೆ ಎರಡನೆ ಗುಂಪಿನ ಸ್ತ್ರೀಯರಲ್ಲಿ ಮರಣ ಪ್ರಮಾಣ, ಕಡಿಮೆ ಜೀವನಾವಧಿ, ಕಡಿಮೆ ಅನಕ್ಷರತೆ, ನಿರುದ್ಯೋಗ (ಅದರಲ್ಲೂ ಯಾವ ಕ್ಷೇತ್ರಗಳಲ್ಲಿ ಉನ್ನತ ತರಬೇತಿ, ಅನುಭವ, ನೈಪುಣ್ಯ ಬೇಕಾಗಿದೆಯೋ ಅಲ್ಲಿ), ಅಭಿವೃದ್ಧಿ ಯೋಜನೆಗಳಿಂದ ಹೊರಬರುವ ಅಥವಾ ಉಂಟಾಗುವ ಸಾಮಾಜಿಕ ಮತ್ತು ಆರ್ಥಿಕ ಅನುಕೂಲಗಳು ಇತ್ಯಾದಿ ಕಡಿಮೆ ಇವೆ. ಪುರುಷರಿಗಿಂತ ಮಹಿಳೆಯರು ಹಿಂದುಳಿದಿದ್ದಾರೆ ಹಾಗೂ ಮಹಿಳೆಯರಲ್ಲಿ ಸಹ ಜಾತಿ, ವರ್ಗ, ಸಂಸ್ಕೃತಿ ಮತ್ತು ಪ್ರಾಂತೀಯ ಆಧಾರಗಳ ಮೇಲೆ ಅನೇಕ ಬದಲಾವಣೆಗಳಿವೆ ಎನ್ನಬಹುದು.

ಎಲ್ಲಾ ದೇಶಗಳಲ್ಲಿಯೂ ಸ್ತ್ರೀಯರು ಎರಡನೆ ದರ್ಜೆಯ ಪ್ರಜೆಗಳೆನ್ನಿಸಿಕೊಂಡು, ಅನೇಕ ಸವಲತ್ತುಗಳಿಂದ ವಂಚಿತರಾಗಿಯೇ ಬಂದಿದ್ದಾರೆ. ಭಾರತದಂತಹ ಪಿತೃಪ್ರಧಾನ ವ್ಯವಸ್ಥೆಯಲ್ಲಂತೂ ಸ್ತ್ರೀಗೆ ಅತಿ ಕೀಳು ದರ್ಜೆ ಸ್ಥಾನವನ್ನು ಸಾಂಪ್ರದಾಯಿಕ ಸಮಾಜವು ಕೊಟ್ಟಿತ್ತು. ಹಾಗೂ, ಜಾತಿ ಪದ್ಧತಿಯನುಸಾರ, ಕೆಳಸ್ತರದ ಜಾತಿಗಳಾದಷ್ಟೂ ಅಲ್ಲಿನ ಮಹಿಳೆಯರ ಸ್ಥಿತಿ ಸಹ ಕಷ್ಟಕರವಾಗಿತ್ತು. ಇಲ್ಲಿನ ಸಾಂಪ್ರದಾಯಿಕ ವ್ಯವಸ್ಥೆಯು ಇಂತಹ ಲಿಂಗಬೇಧಗಳನ್ನು ಎತ್ತಿ ಹಿಡಿದದ್ದು ಕಾಲಾನುಕಾಲದಿಂದ ಮುಂದುವರೆದುಕೊಂಡೇ ಬಂದಿದೆ. ಸ್ತ್ರೀಯರ ಸಾಮಾಜಿಕ ಮತ್ತು ಆರ್ಥಿಕ ದುರ್ಬಲತೆಗೆ ಸಮಾಜವೇ ಕಾರಣವೇ ಹೊರತು ಅವರ (ಸ್ತ್ರೀಯರ) ತಪ್ಪಲ್ಲ ಎನ್ನಬಹುದು. ಅವಕಾಶಗಳನ್ನು ನೀಡಿದಾಗ ಅವರೂ ಸಹ ಪುರುಷರಂತೆ ಮುನ್ನುಗ್ಗಿ ತಮ್ಮ ಮತ್ತು ಕುಟುಂಬದ ಅಭಿವೃದ್ಧಿಗೆ ಕೆಲಸ ಮಾಡಬಹುದಲ್ಲವೇ?

ಈ ಮೇಲಿನ ವಿಷಯಗಳನ್ನು ಚರ್ಚಿಸಿದಾಗ ಕಂಡುಬರುವ / ಎದ್ದು ಕಾಣುವ ನ್ಯೂನತೆ ಎಂದರೆ ಮಹಿಳೆಯರು ತಾವಾಗಿಯೇ ಅಭಿವೃದ್ಧಿ ಯೋಜನೆಗಳನ್ನು ಬಳಸಿಕೊಳ್ಳುವಲ್ಲಿ ಇರುವ ಅನಾನುಕೂಲಗಳು. ಇಂತಹ ಪರಿಸ್ಥಿತಿಯಲ್ಲಿ ಎರಡು ರೀತಿಯ ಪರಿಸ್ಥಿತಿಗಳ ಸುಧಾರಣೆಯಾಗಬೇಕಾಗಿದೆ. ಒಂದು ಮಹಿಳೆಯರು ಸ್ವಾವಲಂಬನೆಯತ್ತ. ಸಬಲೀಕರಣದತ್ತ ಮಾಡಬೇಕಾದ ಪ್ರಯತ್ನ ಇದನ್ನೇ 'ಎಂಪವರ್‌ಮೆಂಟ್' ಎಂಬ ತಲೆಬರಹದಡಿ ಅನೇಕ ಕಾರ್ಯಕ್ರಮಗಳ ಚಿಂತನೆಗಳು ಮತ್ತು ವಾದ ವಿವಾದಗಳ ನಡುವೆ ನಡೆಸುತ್ತಿರುವುದು. ಎರಡನೆಯದು ಮತ್ತು ಮುಖ್ಯವಾದದ್ದೆಂದರೆ, ಯಾವುದೇ ಅಭಿವೃದ್ಧಿ ಯೋಜನೆಯನ್ನು ರೂಪಿಸಿದಾಗ, ಅದು ಮಹಿಳಾಪರ ಹಿತಕಾರಿಯಾಗಿದೆಯೇ, ಅವರೂ ಸಹ ಇದರಿಂದ ಫಲಾನುಭವಿಗಳಾಗುವರೇ ಎಂಬಂತಹ ಜಾಗರೂಕತೆಯ ಅವಶ್ಯಕತೆಯೇ ಆಗಿದೆ.

ಮಹಿಳಾಪರ ಅಭಿವೃದ್ಧಿ ಯೋಜನೆಗಳು : ಒಂದು ವಿಶ್ಲೇಷಣೆ

ಎಲ್ಲ ಅಭಿವೃದ್ಧಿ ಯೋಜನೆಗಳು ಸಹ ಮಹಿಳಾ ಪರ ಚಿಂತನೆಗಳನ್ನಿಟ್ಟಿಕೊಂಡಿದ್ದು, ಅವರು ಅಭಿವೃದ್ಧಿಯನ್ನು ದೃಷ್ಟಿಯಲ್ಲಿಟ್ಟುಕೊಂಡೇ ಅಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸಬೇಕೆಂದು ಬೇರೆ ಹೇಳಬೇಕಾಗಿಲ್ಲ. ಭಾರತ ಸರ್ಕಾರವೂ ಸಹ ಬಹಳ ಹಿಂದೆಯೇ ಈ ದಿಕ್ಕಿನಲ್ಲಿ ನಿಗಾ ವಹಿಸಿ, ಮಹಿಳಾ ಅಭಿವೃದ್ಧಿ ಯೋಜನೆಗಳನ್ನು ಜಾರಿಗೆ ತಂದಿತು. ಅವುಗಳಲ್ಲಿ ಡ್ವಾಕ್ರಾ ಯೋಜನೆಯಂತೂ ಬಹಳ ಜನಪ್ರಿಯವಾಯಿತು. ಇದು ನೇರವಾಗಿ ಮಹಿಳೆಯರಿಗೆ ಮತ್ತು ಬರಿಯ ಮಹಿಳಾ ಫಲಾನುಭವಿಗಳಿಗಾಗಿ ಮೀಸಲಾಗಿದ್ದರೆ, ಇನ್ನುಳಿದ ಅನೇಕ ಕಾರ್ಯಕ್ರಮಗಳು ಸಹ ಕಡ್ಡಾಯವಾಗಿ ಮಹಿಳಾ ವಿಮೋಚನೆ ಮತ್ತು ಅಭಿವೃದ್ಧಿಯ ಕಡೆ ಅತ್ಯಂತ ತೀವ್ರ ಗಮನ ಹರಿಸಿ, ಕಾರ್ಯಕ್ರಮವನ್ನು ರೂಪಿಸಿಕೊಂಡಿವೆ. ಈ ಎಲ್ಲ ಯೋಜನೆಗಳೂ ಸುಮಾರು 70ರ ದಶಕದಿಂದೀಚೆಗೆ ಬಂದಿವೆ. ಹಾಗಾದರೆ, ಇವುಗಳಿಂದಾಗಿರುವ ಮಹಿಳಾ ವಿಮೋಚನೆ ಮತ್ತು ಪ್ರಗತಿ ಎಷ್ಟು?

ಈ ಲೇಖನದಲ್ಲಿ ಮಹಿಳಾ ಅಭಿವೃದ್ಧಿ ಯೋಜನೆಗಳು ಎಷ್ಟರಮಟ್ಟಿಗೆ ಅವರನ್ನು ತಲುಪಿವೆ ಅದರಲ್ಲೂ, ಉದ್ಯೋಗ, ಉದ್ಯಮ ಕಾರ್ಯಕ್ರಮಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಯ ರೂಪುರೇಷೆಗಳೇನು? ಪ್ರವೇಶ ಮತ್ತು ಭಾಗವಹಿಸುವಿಕೆಯಲ್ಲಿ ಅವರಿಗಿರುವ ಅಡ್ಡಿ ಆತಂಕಗಳೇನು ಅವುಗಳ ನಿವಾರಣೆಗಾಗಿ ಸೂಕ್ತ ತರಬೇತಿ, ಶಿಕ್ಷಣ ಮುಂತಾದವು ದೊರಕುತ್ತಿವೆಯೇ? ಒಟ್ಟಾರೆ, ಇಂತಹ ಯೋಜನೆಗಳು ಮಹಿಳೆಯರನ್ನು ಎಷ್ಟರಮಟ್ಟಿಗೆ ಆರ್ಥಿಕವಾಗಿ, ಸಾಮಾಜಿಕವಾಗಿ ಸಬಲಗೊಲಿಸಿವೆ ಎಂಬ ನಿಟ್ಟಿನಲ್ಲಿ ಚರ್ಚೆ ನಡೆಸಲಾಗಿದೆ.

ಮೇಲೆ ನಿವೇದಿಸಿರುವ ವಿಷಯಗಳನ್ನು ಪರಾಮರ್ಶಿಸಿ ನೋಡಿದಾಗ, ಯಾವ ಒಂದು ವಿಶೇಷ ಯೋಜನೆಯನ್ನು ಗುರುಯಾಗಿಟ್ಟುಕೊಂಡು ಈ ಲೇಖನವನ್ನು ಸಿದ್ದಪಡಿಸಿಲ್ಲ. ಯೋಜನೆಗಳ ಬಗ್ಗೆ ಆತ್ಮಾವಲೋಕನವಲ್ಲ ಇದು. ಬದಲಾಗಿ ಅವುಗಳನ್ನು ಒಟ್ಟಾರೆ ಚಿತ್ರಿಸಿಕೊಂಡು, ನಮ್ಮ ಸಾಮಾಜಿಕ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಮಹಿಳೆಯರು ಎಷ್ಟರ ಮಟ್ಟಿಗೆ ಅವುಗಳ ಉಪಯೋಗವನ್ನು ಪಡೆಯಬಲ್ಲರು ಎಂದು ವಿಮರ್ಶಿಸಿ ನೋಡಲು ಪ್ರಯತ್ನಿಸುತ್ತದೆ.

ಅಭಿವೃದ್ಧಿ ಕಾರ್ಯಕ್ರಮಗಳನ್ನು ಅವಲೋಕಿಸಿದಾಗ ಅವುಗಳ ಯಶಸ್ಸು ಮೂರು ಅಂಶಗಳ ಮೇಲೆ ಅವಲಂಬಿಸಿರುವುದು ನಿಶ್ಚಿತವೆನ್ನಿಸುತ್ತದೆ. ಮೊದಲನೆಯದಾಗಿ ಅವುಗಳ ರಚನೆ, ರೂಪಿಕೆ ಇತ್ಯಾದಿ. ಎರಡನೆಯದು ಅವುಗಳ ಅನುಷ್ಠಾನ. ಮೂರನೆಯದು ಅವುಗಳಲ್ಲಿರುವ ಲೋಪದೋಷಗಳ ಗುರುತಿಸುವಿಕೆ ಹಾಗೂ ಸೂಕ್ತ ಸಲಹೆ, ಸೂಚನೆ ಇತ್ಯಾದಿ. ಈ ಮೂರು ಹಂತಗಳಲ್ಲಿ ಬರಿಯ ಸರಕಾರದ ಪಾತ್ರವಲ್ಲದೆ, ಯೋಜನೆಗಳು ಯಾರಿಗಾಗಿ ಅನುಷ್ಠಾನವಾಗುತ್ತಿವೆಯೋ ಅವರ ಪಾತ್ರ ಸಹ ಬಹಳಷ್ಟಿರುತ್ತದೆ. ಮೊದಲಿಗಿಂತ ಈಚೆಗೆ ಯೋಜನೆಗಳ ರಚನೆಯಲ್ಲಿ ಅನೇಕ ಸುಧಾರಣೆಗಳಾಗಿವೆ. ಜನರ ಸಹಭಾಗಿತ್ವದ ಪಾತ್ರ ಇಲ್ಲಿ ಮುಖ್ಯ. ಯಾರಿಗಾಗಿ ಯೋಜನೆಗಳು ರಚಿತವಾಗುತ್ತಿವೆಯೋ, ಅವರೇ ಅದರಲ್ಲಿ ಪ್ರಮುಖ ಪಾತ್ರ ವಹಿಸುವುದು ಅವಶ್ಯಕವೆಂದರಿತು, ಜನರ ಭಾಗವಹಿಸುವಿಕೆಗೆ ಪ್ರಾಧಾನ್ಯತೆ ಕೊಡಲಾಯಿತು.

ಇದನ್ನೇ ನಾವಿಲ್ಲಿ ಬಹಳ ಮಹತ್ವದ ಘಟ್ಟವೆಂದು ಪರಿಗಣಿಸಬಹುದಾಗಿದೆ. ಯಾರಿಗಾಗಿ ಅಭಿವೃದ್ಧಿಯ ಅವಶ್ಯಕತೆ ಇದೆಯೋ ಅವರನ್ನೇ ಹೊರತು ಪಡಿಸಿ ಕಾರ್ಯಕ್ರಮಗಳು ರೂಪಿತವಾದಾಗ ಅವರ ಕಷ್ಟನಷ್ಟಗಳನ್ನು ಆಸೆ ಆಕಾಂಕ್ಷೆಗಳನ್ನು ಈ ಯೋಜನೆಗಳು ಮೈಗೂಡಿಸಿಕೊಂಡಿವೆ ಎಂದು ಹೇಗೆ ಹೇಳುವುದು ಸಾಧ್ಯವಿತ್ತು? ದಂತಗೋಪುರಗಳಲ್ಲಿ ಕುಳಿತು ಬಡಜನರ ಜೀವನದ ಪರಿಚಯವಿಲ್ಲದೆ, ಯೋಜನೆಗಳನ್ನು ರೂಪಿಸುತ್ತಿದ್ದ ಕಾಲವೊಂದಿತ್ತು. ಅಲ್ಲಿಂದ ಕ್ರಮೇಣ ಜನರ ಸಹಭಾಗಿತ್ವದೊಂದಿಗೆ, ಯೋಜನೆಗಳು ರೂಪುಗೊಳ್ಳಲು ಅನುವಾದವು. ಸಮಾಜವನ್ನು 'ಮೇಲಿನಿಂದ ಕೆಳಕ್ಕೆ' ಅವಲೋಕಿಸುವ ವಿಧಾನವು 'ಕೆಳಗಿನಿಂದ ಮೇಲಕ್ಕೆ' (ಬಾಟಮ್ ಅಪ್ ವಿಧಾನ) ಎಂಬ ನವ ವಿಧಾನಕ್ಕೆ ಅನುವು ಮಾಡಿಕೊಟ್ಟಿತು.

ಎರಡನೆಯದಾಗಿ ಈ ರೀತಿಯ ಪರಿಸ್ಥಿತಿಯಲ್ಲಿ ಮತ್ತೊಂದು ಹೊಸ ವಾಸ್ತವ ಎದುರಾಯಿತು. ಅದೇನೆಂದರೆ, ಜನರ ಜೀವನ ವಿಧಾನಗಳನ್ನು ಕಷ್ಟ ಸವಾಲುಗಳನ್ನು ಹೊಸಬರಾಗಿ ಹೊರಗಿನಿಂದ ಯೋಜನಾಧಿಕಾರಿಗಳು ವೀಕ್ಷಿಸುವ ಬದಲಾಗಿ, ಜನರು ಆ ಸಮಸ್ಯೆ ಸವಾಲುಗಳನ್ನು ಹೇಗೆ ಭಾವಿಸುತ್ತಿದ್ದಾರೋ ಆ ದೃಷ್ಟಿಕೋನದಿಂದ ಯೋಜನೆಗಳನ್ನು ತಯಾರಿಸುವ ಒತ್ತಡ ಬಂದಿತು. ಇದು ಬಹಳ ಮುಖ್ಯ. ಏಕೆಂದರೆ, ಇದರಲ್ಲಿ ಜನರಿಗೆ ಪ್ರಾಮುಖ್ಯತೆ ಬಂದಿತು. ಅಧಿಕಾರಶಾಹಿ ವ್ಯವಸ್ಥೆಗಲ್ಲ. ಇದರ ಜೊತೆ ಜೊತೆಗೆ, ಪಂಚಾಯಿತಿರಾಜ್ ಸಂಸ್ಥೆಗಳಿಗೆ ಹೊಸ ಜೀವ ತುಂಬಿ ನವೀಕರಿಸಿ, ಕಾನೂನು ಬೆಂಬಲ (ಸಂವಿಧಾನ ತಿದ್ದುಪಡಿಯೊಂದಿಗೆ) ಕೊಟ್ಟು ಅಭಿವೃದ್ಧಿಯಲ್ಲಿ ಜನರ ಭಾಗವಹಿಸುವಿಕೆಯನ್ನು ಮೇರುಸ್ಥಿತಿಗೆ ಕೊಂಡೊಯ್ಯಲಾಯಿತು.

ಇಷ್ಟೆಲ್ಲ ಕ್ರಾಂತಿಕಾರಕ ಬದಲಾವಣೆಗಳ ನಡುವೆ, ಹೆಚ್ಚು ಕಡಿಮೆ ತಟಸ್ಥವಾದ ವಿಷಯವೆಂದರೆ, ಜನರು ಗಂಡು ಮತ್ತು ಹೆಣ್ಣು ಎಂಬ ಎರಡು ಗುಂಪುಗಳಿಗೆ ಸೇರಿದ್ದು, ಸಮಾಜದ ರೂಡಿ, ಆಚಾರ ವಿಚಾರಗಳಿಂದ ಪ್ರಭಾವಿತರಾಗಿ , ಕಟ್ಟುಪಾಡುಗಳನ್ನು ಪಡೆದು ಅಭಿವೃದ್ಧಿ ಪಥದಲ್ಲಿ ಚಲಿಸಲು ತಮ್ಮದೇ ಆದಂತಹ 'ಬೇಲಿ'ಗಳನ್ನು ಹೊಂದಿರುತ್ತಾರೆ ಎಂಬುದು. ಈ 'ಬೇಲಿ'ಗಳು ಗಂಡಿಗಿಂತ ಹೆಚ್ಚು ವಿಷಯದಲ್ಲಿ ಅತಿ ಸಂಕೀರ್ಣವಾಗಿದ್ದು, ಕಷ್ಟಕರವಾಗಿರುತ್ತದೆ ಎಂಬುದು ಇನ್ನೊಂದು ವಿಷಯ.

ಹಾಗಾದರೆ, ಯೋಜನೆಗಳು ಅದರಲ್ಲೂ ಮಹಿಳಾಪರವಾಗಿಯೇ ನಿಯೋಜಿಸಲ್ಪಟ್ಟಿರುವಂತಹ ಯೋಜನೆಗಳು ಸಹ, ಮಹಿಳೆಯರ ನೈಜ ಪರಿಸ್ಥಿತಿಯನ್ನು ಚಿತ್ರಿಸಲು ಸಾಧ್ಯವಾಗಿವೆಯೇ? ಇವು ಡ್ವಾಕ್ರಾ, ಮಹಿಳಾ ಸಮೃದ್ಧಿ ಯೋಜನೆ, ಸ್ವರ್ಣ ಜಯಂತಿ ಮಹಿಳಾ ಯೋಜನೆ ಇತ್ಯಾದಿಗಳಾಗಿರಬಹುದು ಅಥವಾ ಹೆಚ್ಚೂ ಕಡಿಮೆ ಎಲ್ಲಾ ಅಭಿವೃದ್ಧಿ ಯೋಜನೆಗಳ ಭಾಗವಾಗಿರುವ ಮಹಿಳಾ ಅಭಿವೃದ್ಧಿ ಯೋಜನೆಗಳು ಸಹ ಆಗಿರಬಹುದು.

ಈ ದಿಕ್ಕಿನಲ್ಲಿ ನಡೆಸಲಾಗಿರುವ ಅನೇಕ ಸಮೀಕ್ಷೆಗಳು, ಅಧ್ಯಯನಗಳ ಪ್ರಕಾರ, ಸಾಧಿಸಬೇಕಾದ್ದು ಬೆಟ್ಟದಷ್ಟಿದೆ. ಈ ಮಾತು ಹೇಳುವಾಗ ಒಂದು ಎಚ್ಚರಿಕೆ ಮಾತು. ಸಂಖ್ಯಾಧಾರಿತ ಅಧ್ಯಯನಗಳೇನೋ ಸಾಕಷ್ಟು ಅಭಿವೃದ್ಧಿ ಆಗಿಬಿಟ್ಟಿದೆ ಎನ್ನುವ ಸೂಚ್ಯಾಂಕಗಳನ್ನು ನೀಡಬಹುದು. ಸರಕಾರಿ ಅಧಿಕಾರಿಗಳಿಗಿರುವ ಕಟ್ಟಾಜ್ಞೆ ಎಂದರೆ, ಇಂತಿಷ್ಟು ಸಾಧನೆ ಮಾಡಬೇಕು (ವಾರ್ಷಿಕವಾಗಿ/ಮಾಸಿಕವಾಗಿ) ಮತ್ತು ಅವರು ಹಿರಿಯ ಅಧಿಕಾರಿಗಳಿಗೊಪ್ಪಿಸುವ ವಾರ್ಷಿಕ/ಮಾಸಿಕ ವರದಿಗಳಲ್ಲಿ ಇಂತಿಷ್ಟು ಸಾಧನೆ/ಪ್ರಗತಿ ಆಗಿದೆ ಎಂದು ನಿವೇದಿಸಿರುತ್ತಾರೆ. ಮೇಲಾಗಿ, ಅಭಿವೃದ್ಧಿ ಕಾರ್ಯಕ್ರಮಗಳು ಜನರ ಅನೇಕ ಗುಂಪುಗಳನ್ನು ಗಮನದಲ್ಲಿರಿಸಿಕೊಂಡೇ ಅನುಷ್ಠಾನವಾಗಿರುತ್ತವೆ. ಬಡತನ ರೇಖೆಗಿಂತ ಕೆಳಗಿರುವವರು, ಪರಿಶಿಷ್ಟ ಜಾತಿ/ವರ್ಗಗಳು, ಹಿಂದುಳಿದವರು, ಅಲ್ಪಸಂಖ್ಯಾತರು ಮತ್ತು ಮಹಿಳೆಯರು ಇತ್ಯಾದಿ. ಈ ಎಲ್ಲ ಕಲಮುಗಳಲ್ಲಿ ಸೂಚ್ಯಾಂಕಗಳನ್ನು ತುಂಬಿ ಇಂತಿಷ್ಟು ಪ್ರಗತಿ/ ಸಾಧನೆ ಎಂದು ತೋರಿಸಲಾಗುತ್ತದೆ.

ಇಂತಹ ವರದಿಗಳಲ್ಲಿ ನ್ಯೂನತೆಯೆಂದರೆ, ಅನುಕೂಲ ಪಡೆದ / ಅಭಿವೃದ್ಧಿ ಹೊಂದಿದ ಆ ವ್ಯಕ್ತಿಗಳು ಯಾರು ಎಂಬ ಸತ್ಯ ನಿಗೂಢವಾಗಿಯೇ ಉಳಿಯುತ್ತದೆ. ಯಾವ ಗುಂಪಿಗೆ ಸೇರಿದ ವ್ಯಕ್ತಿಯಾಗಲಿ, ಬರಿಯ ಒಂದು ಮಾಪನದಿಂದ ಅಳೆಸಿಕೊಳ್ಳುವಂತಿರುವುದಿಲ್ಲ. ಜಾತಿ, ವರ್ಗ, ಲಿಂಗ, ಪ್ರಾಂತ್ಯ ಹೀಗೆ ಅನೇಕ ಬೇಧಗಳಿರುತ್ತವೆ. ಇವುಗಳಲ್ಲಿ ಲಿಂಗಭೇದವು ಪ್ರಮುಖವಾಗಿದ್ದು, ಅದು ಉಳಿದವುಗಳಿಂದ ನಿರ್ಧಾರಿತವಾಗಿರುತ್ತವೆ. ಸಾಂಖ್ಯಿಕ ವರದಿಗಳು ಇವೆಲ್ಲವುಗಳ ಛಾಯೆಯಾಗಿರುವುದಿಲ್ಲ.

ಇನ್ನು ಮೌಲಿಕ ಅಧ್ಯಯನಗಳನ್ನು ನೋಡಿದಾಗ ಅಲ್ಲಿ ಸಹ ವಾಸ್ತವಿಕ ಅಂಶಗಳ ಕೊರತೆ ಉಳಿದಿರುತ್ತದೆ. ಅಧ್ಯಯನ ವಿಧಾನಗಳು ಸಹ ವಸ್ತು ಸ್ಥಿತಿಯಿಂದ ದೂರವಾದಷ್ಟೂ ಅಧ್ಯಯನದಲ್ಲಿ ಬಿರುಕುಗಳು ಉಳಿಯುತ್ತವೆ. ಪ್ರಶ್ನಾವಳಿ, ಸಂದರ್ಶನ ವಿಧಾನಗಳಿಗಿಂತ "ಭಾಗವಹಿಸಿಕೊಂಡು ಅವಲೋಕಿಸುವ" ವಿಧಾನ ಫಲಕಾರಿಯಾಗಿದೆ. ಇಂತಹ ವಿಧಾನದಿಂದ ಗೋಚರವಾಗಿರುವ ಅನೇಕ ಸತ್ಯಗಳನ್ನು ಕೆಳಕಂಡಂತೆ ಚರ್ಚಿಸಲಾಗಿದೆ.

ಮಹಿಳೆಯರ ಹಿತವನ್ನು ದೃಷ್ಟಿಯಲ್ಲಿರಿಸಿಕೊಂಡೇ ರಚಿತವಾಗಿರುವ ಕಾರ್ಯಕ್ರಮಗಳಿದ್ದಾಗ್ಯೂ ಮಹಿಳೆಯರು ಉದ್ಯೋಗ ಉದ್ಯಮಗಳಲ್ಲಿ ಭಾಗವಹಿಸುವುದು ತೊಡಕಾಗಿರುವುದು ಏಕೆ? ಇದು ನಮ್ಮ ಮುಂದಿರುವ ಮೊದಲ ಪ್ರಶ್ನೆ.

ಅಭಿವೃದ್ಧಿಯಿಂದ ವಂಚಿತವಾಗಿರುವ ಪ್ರದೇಶಗಳಲ್ಲಿ ಹೆಚ್ಚು ಭಾಗ ಗ್ರಾಮಗಳಾಗಿವೆ ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯ. ಹಾಗೆಂದು ನಗರಗಳಲ್ಲಿ ಎಲ್ಲ ಜನರು ಮುಂದುವರೆದಿದ್ದಾರೆ ಎಂದಲ್ಲ. ಇಲ್ಲಿ ಅನೇಕ ಅಂಶಗಳಿಂದ ಜನರು ಹೆಚ್ಚು ಪ್ರಜ್ಞಾವಂತರು. ಇದನ್ನು ಮಹಿಳೆಯರಿಗೆ ಅನ್ವಯಿಸಿದಾಗ ನಗರ ಗ್ರಾಮಗಳ ಅಂತರ ಇನ್ನೂ ಹೆಚ್ಚಾಗಿದೆ ಎಂಬುವುದು ಕಂಡು ಬರುತ್ತದೆ. ಹಿಂದಿನ ದಿನಗಳಿಗಿಂತ ಈಗ ಪರಿಸರ ಬದಲಾಗಿರುವ ದಿಟ. ಸಮಾಜಶಾಸ್ತ್ರಜ್ಞರು ಹೇಳಿರುವಂತೆ, ಕೈಗಾರೀಕರಣ, ನಗರೀಕರಣ, ಔದ್ಯೋಗಿಕ ಕ್ರಾಂತಿ, ವಿಜ್ಞಾನ, ಸಂಚಾರ, ಸಂಪರ್ಕ, ಮಾಧ್ಯಮಗಳು ಹೊಸ ಆರ್ಥಿಕ ನೀತಿ, ಉದಾರೀಕರಣ ಇತ್ಯಾದಿಗಳಿಂದ ವಿಕಾಸ ಉಂಟಾಗಿದೆ.

ಆದರೂ ನಮ್ಮ ಸಮಾಜದ ಕಂದಾಚಾರಗಳಿಂದ ಸ್ತ್ರೀಯರು ಪೂರ್ತಿಯಾಗಿ ಹೊರಬರಲಾಗಿಲ್ಲ. ಇದು ಎಲ್ಲ ಸ್ತ್ರೀಯರಿಗೂ ಅನ್ವಯಿಸುವ ವಿಷಯ. ಪುರುಷ ಪ್ರಧಾನ ವ್ಯವಸ್ಥೆ, ಜಾತಿಧರ್ಮಗಳ ಕವಚಗಳು, ಅನಕ್ಷರತೆ ಮುಂತಾದವುಗಳಿಂದ ಬಂಧಿತರಾಗಿರುವ ಸ್ತ್ರೀಯರಿಗೆ ಯೋಜನೆಗಳ ಪೂರ್ಣ ಪ್ರಯೋಜನ ಸಿಗಲಾಗಿಲ್ಲ. ಉದಾಹರಣೆಗೆ, ಗ್ರಾಮೀಣ ಪ್ರದೇಶಗಳಲ್ಲಿ ಆಚರಣೆಯಲ್ಲಿರುವ ಅನೇಕ ವೃತ್ತಿ ಕುಶಲಕಲೆಗಳಲ್ಲಿ ಮಹಿಳೆಯರ ಪ್ರಧಾನ ಪಾತ್ರವಹಿಸುವುದು ಕಾಲಾನುಕಾಲದಿಂದ ಬಂದಿರುವ ತಿಳಿದಿರುವ ವಿಷಯ. ವ್ಯವಸಾಯ, ರೇಷ್ಮೆ ಕೃಷಿ, ಕುಂಬಾರಿಕೆ, ಕಮ್ಮಾರಿಕೆ, ನೇಯ್ಗೆ ಚರ್ಮದ ಕೆಲಸ ಹೀಗೆ ಹಲವು ಹನ್ನೊಂದು ಕೆಲಸಗಳಲ್ಲಿ ಮಹಿಳೆಯರು ನಿರತರಾಗಿಯೇ ಇದ್ದಾರೆ. ಬಾಲ್ಯದಿಂದಲೇ ಇವುಗಳಲ್ಲಿ ಆಕೆಗೆ ನೈಪುಣ್ಯತೆ ಶುರುವಾಗುತ್ತದೆ. ಆದರೆ ಸ್ವತಂತ್ರವಾಗಿ ಉತ್ಪಾದನೆ ಮಾಡುವ ಸಾಮರ್ಥ್ಯ (ನಿಪುಣತೆ) ಇದ್ದಾಗ್ಗೂ, ಸಾಮಾಜಿಕ ಪರಿಸರದ ಒತ್ತಡದಿಂದ ಆಕೆಗೆ ಇದು ಸಾಧ್ಯವಾಗುತ್ತಿಲ್ಲ. ಆಕೆಗೆ ಎರಡನೆ ದರ್ಜೆಯ ಸಹಾಯಕಿಯಾಗಿ ದುಡಿಯುವ ಕೆಲಸವೇ ಮುಂದುವರೆದಿದೆ. ಯೋಜನೆಗಳ ಮೂಲಕ ಕೊಡಲಾಗಿರುವ ಉದ್ಯೋಗ ಉದ್ಯಮಗಳಲ್ಲಿ ಸ್ತ್ರೀಯರು ತೊಡಗಲೆಂದು ಅನೇಕ ಪೂರಕ ಪರಿಸ್ಥಿತಿಗಳನ್ನು ಒದಗಿಸಲಾಗಿದೆ. ಒಂಟಿಯಾಗಿ ಎದುರಿಸಲಾಗದ್ದನ್ನು ಜಂಟಿಯಾಗಿ, ಇತರ ಮಹಿಳೆಯರ ಬಲ, ಸಹಕಾರದೊಂದಿಗೆ ಸಾಧಿಸಲು ಎಂಬ ಹಿರಿಯಾಸೆಯೊಂದಿಗೆ, ಮಹಿಳಾ ಮಂಡಳಿಗಳನ್ನು ರೂಪಿಸಿಕೊಂಡು, ಉದ್ಯೋಗ ಉದ್ದಿಮೆಗಳನ್ನು ತೆಗೆದುಕೊಳ್ಳಲು ಉತ್ತೇಜನ ಕೊಡಲಾಯಿತು. ಡ್ವಾಕ್ರಾ ಯೋಜನೆಯ ಗುರಿ ಇದೇ ಆಗಿತ್ತು. ಆದರೆ, ಈ

ಗುಂಪುಗಳ ರಚನೆ, ಕಾರ್ಯ ವಿನ್ಯಾಸದಲ್ಲಿ ಅನೇಕ ನ್ಯೂನತೆಗಳು ಅಧ್ಯಯನಗಳಿಂದ ಕಂಡು ಬಂದಿವೆ. ಫಲಾನುಭವಿಗಳನ್ನು ಆರಿಸುವಾಗ ರಾಜಕೀಯ ಒತ್ತಡಗಳು, ಸ್ವಾರ್ಥಪರತೆ, ಅಧಿಕಾರಶಾಹಿ ಧೋರಣೆ, ಜಾತಿ ಒತ್ತಡಗಳು, ಮುಂತಾದ ಅಡೆತಡೆಗಳುಂಟಾದವು. ಹಾಗೆಯೇ ಉದ್ದಿಮೆಗಳನ್ನು ನಡೆಸುವಾಗ ಕುಟುಂಬದ ಹಿರಿಯರ ಪುರುಷರ ದಬ್ಬಾಳಿಕೆ, ಬಿಡುವಿಲ್ಲದ ಗೃಹಕೃತ್ಯಗಳು, ಮಕ್ಕಳ ಲಾಲನೆ, ಪಾಲನೆ ಒಂದು ಕಡೆಯಾದರೆ, ಗುಂಪಿನ ಸದಸ್ಯರ ನಡುವೆ ಜಗಳ, ಭಿನ್ನಾಭಿಪ್ರಾಯಗಳು, ಹಣದ ದುರುಪಯೋಗ ಇತ್ಯಾದಿ ಮತ್ತೊಂದು ಕಡೆ, ಇದೆಲ್ಲಕ್ಕೂ ಮಿಗಿಲಾಗಿ ತರಬೇತಿ ಮತ್ತು ನೈಪುಣ್ಯತೆ ಕಾರ್ಯಕ್ರಮಗಳು ಸಹ ಸರಿಯಾಗಿ ನಡೆದಿಲ್ಲದಿರುವುದು ಕಂಡುಬಂದಿದೆ. ಕಾರ್ಯಕ್ರಮಗಳ ಸಮಯ, ವೇಳಾಪಟ್ಟಿ ತರಬೇತಿದಾರರ ಸಹನೆ, ಕುಶಲತೆ, ಸ್ಥಳ ಮತ್ತು ತರಬೇತಿ ಹೊಂದಲಿರುವ ಮಹಿಳೆಯರ ಆರ್ಥಿಕ ಪರಿಸ್ಥಿತಿ, ಜಾತಿ ಮುಂತಾದವುಗಳನ್ನು ಸಮರ್ಪಕವಾದ ತರಬೇತಿ ಆಗುವುದರಲ್ಲಿ ಅಡ್ಡಿ ಆತಂಕಗಳನ್ನು ತಂದಿವೆ.

ವ್ಯವಸಾಯ, ರೇಷ್ಮೆ, ಹೈನುಗಾರಿಕೆ ಮುಂತಾದ ಉದ್ದಿಮೆಗಳ ಬಗ್ಗೆ ಜನರಿಗೆ ತಿಳುವಳಿಕೆ ಕೊಡಲು ಇರುವ ವಿಸ್ತರಣಾ ಸೇವೆಗಳು ಸಹ ಅನೇಕ ವೇಳೆ ಮಹಿಳೆಯರಿಗೆ ಸರಿಯಾಗಿ ತಲುಪದೆ ಹೋಗುತ್ತವೆ. ಇಂತಹ ಅಧಿಕಾರಿಗಳು ಸಾಮಾನ್ಯವಾಗಿ ಪುರುಷರಾಗಿದ್ದು, ಕುಟುಂಬದ ಹಿರಿಯ ಪುರುಷನ ಜೊತೆ ಮಾತ್ರ ಪ್ರತಿಕ್ರಿಯಿಸುವ ಸಾಮಾಜಿಕ ಬಂಧನಕ್ಕೊಳಗಾಗಿ, ಮಹಿಳೆ ಈ ಜ್ಞಾನದಿಂದ ಸಂಪೂರ್ಣವಾಗಿ ವಂಚಿತಳಾಗಿಯೇ ಉಳಿಯುವಂತಾಗಿದೆ.

ಅನೇಕ ವೇಳೆ ಪೂರ್ವಾಗ್ರಹ ಪೀಡಿತವಾಗಿ ಕುಟುಂಬದ ಹಿರಿಯರು ಈ ಉದ್ಯಮಶೀಲ ಮಹಿಳೆಯರನ್ನು ಬದಲಾವಣೆಯ ಪಥದಿಂದ ವಿಚಲಿತರಾಗುವಂತೆ ಮಾಡುತ್ತಾರೆ. ಪಡೆದ ತರಬೇತಿ ಸಹ ಉಪಯೋಗವಿಲ್ಲದಂತೆ ಆಗುತ್ತದೆ.

ಮೂರನೆಯ ಸಮಸ್ಯೆ ಎಂದರೆ, ಉದ್ಯಮಗಳನ್ನು ಒಂದು ಗುಂಪಿನ ಮಹಿಳೆಯರಿಗೆ ಪರಿಚಯಿಸಿದಾಗ, ಆ ಮಹಿಳೆಯರಿಗೆ ಆ ಉದ್ಯಮದಲ್ಲಿ ಏನೇನೂ ಆಸಕ್ತಿ ಇಲ್ಲದಿದ್ದರೆ, ಅಥವಾ ಆ ಪ್ರಾಂತ್ಯದಲ್ಲಿ ಆ ಕಸುಬು ಎಲ್ಲೂ ಇಲ್ಲದಿದ್ದು ಜನರಿಗೆ ದರ ಪರಿಚಯವೇ ಇಲ್ಲದಿದ್ದರೆ, ಅಥವಾ ಅದನ್ನು ಉತ್ಪಾದಿಸುವ ಕಲೆ ತಿಳಿದಿರದಿದ್ದರೆ, ಆಗ ಸಹ ಉದ್ಯಮ ಕುಂಠಿತವಾಗುತ್ತದೆ. ಮಹಿಳೆ ಉದ್ದಿಮೆದಾರರು ತಮ್ಮ ಕಲಕಸುಬುಗಳನ್ನು ಉದ್ದಿಮೆಯನ್ನಾಗಿ ಮಾರ್ಪಡಿಸಿದಾಗ ಯಶಸ್ಸು ಕಂಡಿರುವ ಅನೇಕ ನಿದರ್ಶನಗಳಿವೆ.

ನಾಲ್ಕನೆಯದಾಗಿ, ಕುಲಕಸುಬುಗಳು ಉದ್ದಿಮೆಗಳಾಗುವುದಕ್ಕೂ, ಹೊಸ ಕಸುಬುಗಳನ್ನು ಉದ್ಯಮಗಳಾಗಿ ಅಳವಡಿಸಿಕೊಳ್ಳುವುದಕ್ಕೂ ಮಹಿಳೆಯರಲ್ಲಿ ವ್ಯತ್ಯಾಸ ಕಂಡುಬಂದಿದೆ. ಕಚ್ಚಾ ವಸ್ತುಗಳ ಸಿಗುವಿಕೆ, ಸರಬರಾಜು ಮತ್ತು ಉತ್ಪಾದಿಸಿದ ವಸ್ತುಗಳ ವಿಲೇವಾರಿ ಇವೆಲ್ಲಕ್ಕೂ ಅನಾನುಕೂಲಗಳಿರುತ್ತವೆ. ಮಹಿಳೆಯಾಗಿ ತಮ್ಮ ಮನೆ/ಗ್ರಾಮದಿಂದ ದೂರ ಹೋಗಿ ಇವೆಲ್ಲವುಗಳ ವ್ಯವಸ್ಥೆ ಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲ.

ಗ್ರಾಮ ಸೇವಿಕೆ / ವಿಸ್ತರಣಾಧಿಕಾರಿಗಳು ಮತ್ತಿತರರು ಮಹಿಳೆಯರಾಗಿದ್ದರೂ, ಮಹಿಳೆಯರ ಬಗ್ಗೆ ಸಹಾನುಭೂತಿ ತೋರುವುದಿಲ್ಲ. ಉದ್ದಿಮೆಗಳನ್ನು ನಿಭಾಯಿಸುವಲ್ಲಿ ಅವರಿಗೆ ಮಾರ್ಗದರ್ಶನ ತೋರಿ ನಡೆಸಿಕೊಂಡು ಹೋಗುವಲ್ಲಿ ಅವರು ಯಶಸ್ವಿಯಾಗಿಲ್ಲವೆಂದು ಕಂಡುಬಂದಿದೆ. ಕೆಲವು ಬಾರಿ ಅವರು ಎಷ್ಟೇ ಕಷ್ಟಪಟ್ಟರೂ ಶ್ರಮ ವಹಿಸಿ ತರಬೇತಿ ಕೊಟ್ಟಾಗಿಯೂ ಕೂಡ ಮಹಿಳೆ ಫಲಾನುಭವಿಗಳು ಪ್ರತಿಕ್ರಿಯಿಸಿ, ಆಸಕ್ತಿ ತೋರಿಸಿ ಕೆಲಸ ಮಾಡುವುದಿಲ್ಲ, ಬದಲಾಗಿ ಅಧಿಕಾರಿಗಳ ಮನ ನೋಯಿಸಿ ಉದ್ದಿಮೆಯು ಸ್ಥಗಿತವಾಗುವುದಕ್ಕೆ ದಾರಿ ಮಾಡಿಕೊಡುತ್ತಾರೆ.

ಕೊನೆಯದಾಗಿ, ಮಹಿಳಾ ಉದ್ದಿಮೆದಾರರ ಅಜ್ಞಾನ, ಮೌಢ್ಯ ಮತ್ತು ಅಸಡ್ಡೆಯ ಫಲವಾಗಿ ಅವರು ಸಾಲದ ಹೊರೆ ಹೊತ್ತು ತೀರಿಸಲಾಗದೆ ಒದ್ದಾಡುವ ಪರಿಸ್ಥಿತಿ ತಲುಪುತ್ತಾರೆ. ಕೆಲವೊಮ್ಮೆ, ಇದೇ ಕಾರಣಗಳಿಂದ ತಮ್ಮ ಕುಟುಂಬದ ಪುರುಷರಿಂದ ಸಹ ತುಳಿತಕ್ಕೊಳಗಾಗುತ್ತಾರೆ.

ಒಂದು ವೇಳೆ ಉದ್ದಿಮೆ ಯಶಸ್ವಿಯಾಗಿ ನಡೆದರೂ ಎರಡು ಹಂತಗಳಲ್ಲಿ (ಕಚ್ಚಾ ವಸ್ತುಗಳ ಸರಬರಾಜು ಮತ್ತು ಸಿದ್ಧಪಡಿಸಿದ ಪದಾರ್ಥಗಳ ವಿಲೇವಾರಿ) ಸ್ವತಃ ತೀರ್ಮಾನ ತೆಗೆದುಕೊಳ್ಳುವುದು ಮತ್ತು ಖರ್ಚು ವೆಚ್ಚದ ವ್ಯಯ, ಆದಾಯ ಮೇಲಿನ ಸ್ವಾಮ್ಯ ಮುಂತಾದವುಗಳಿಂದ ಅವರು ವಂಚಿತರಾಗಿಯೇ ಉಳಿದಿದ್ದಾರೆ.

ಕೃಪೆ : ಮಹಿಳಾ ಅಧ್ಯಯನ

★

ಮಲೇರಿಯಾ ನಿಯಂತ್ರಣದಲ್ಲಿ ಸಮುದಾಯದ ಸಹಭಾಗಿತ್ವ

ಮಲೇರಿಯ ರೋಗವು ಈ ಕೆಳಕಂಡ ಕ್ರಮಗಳನ್ನು ಅನುಸರಿಸಿ.

★ ಯಾವುದೇ ಜ್ವರ ಮಲೇರಿಯ ಇರಬಹುದು. ಆದಷ್ಟು ಶೀಘ್ರವಾಗಿ ರಕ್ತ ಪರೀಕ್ಷೆ ಮಾಡಿಸಿ ಕ್ಲೋರೋಕ್ವಿನ್ ಗುಳಿಗೆಗಳನ್ನು ತೆಗೆದುಕೊಳ್ಳಿ.

★ ಮಲೇರಿಯ ಎಂದು ರಕ್ತ ಪರೀಕ್ಷೆಯಲ್ಲಿ ಖಚಿತಪಟ್ಟಲ್ಲಿ ತಪ್ಪದೇ ತೀವ್ರ ಚಿಕಿತ್ಸೆ ಪಡೆಯಿರಿ. ಈ ಚಿಕಿತ್ಸೆಯ ವಿವರಗಳು ಹಾಗೂ ಗುಳಿಗೆಗಳು ಆರೋಗ್ಯ ಕಾರ್ಯಕರ್ತರಲ್ಲಿ ಹಾಗೂ ಎಲ್ಲಾ ಸರ್ಕಾರಿ ಆಸ್ಪತ್ರೆ, ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಉಚಿತವಾಗಿ ದೊರಕುತ್ತದೆ.

★ ಶಿಶುಗಳು ಮತ್ತು ಗರ್ಭಿಣಿಯರಿಗೆ ಮಲೇರಿಯ ರೋಗವು ಆತಂಕಕಾರಿಯಾಗಿದ್ದು, ಅಂತಹವರು ಯಾವುದೇ ಜ್ವರವಿರಲಿ, ತಡಮಾಡದೇ ವೈದ್ಯರ ಸಲಹೆ ಪಡೆಯುವುದು.

★ ನೀರು ಶೇಖರಣಾ ತೊಟ್ಟಿಗಳನ್ನು ಭದ್ರವಾದ ಮುಚ್ಚಳದಿಂದ ಯಾವಾಗಲೂ ಮುಚ್ಚಿರಬೇಕು. ವಾರಕ್ಕೊಮ್ಮೆ ನೀರನ್ನು ಸಂಪೂರ್ಣವಾಗಿ ಖಾಲಿ ಮಾಡಿ, ಒಣಗಿಸಿ ಮತ್ತೆ ಭರ್ತಿ ಮಾಡಿಕೊಂಡಲ್ಲಿ ಇಂತಹ ನೀರಿನ ಶೇಖರಣೆಗಳಲ್ಲಿ ರೋಗವಾಹಕ ಸೊಳ್ಳೆಗಳ ಉತ್ಪತ್ತಿಯನ್ನು ತಡೆಗಟ್ಟಬಹುದು.

★ ಆರೋಗ್ಯ ಇಲಾಖೆಯು ಕೈಗೊಳ್ಳುವ ಕೀಟನಾಶಕ ಸಿಂಪಡಣಾ ಕಾರ್ಯಕ್ಕೆ ಸಂಪೂರ್ಣ ಸಹಕಾರ ನೀಡಿ.

★ ಸದಾ ನೀರಿರುವ ಕೆರೆ, ಕುಂಟೆ, ಬಾವಿ, ತೋಟದ ಕಾರಂಜಿಗಳು ಮುಂತಾದ ತಾಣಗಳಲ್ಲಿ ಸೊಳ್ಳೆಯ ಮರಿಗಳನ್ನು ತಿನ್ನುವ ಗ್ಯಾಂಬೂಸಿಯ ಮತ್ತು ಗಪ್ಪಿ ಎಂಬ ಸಣ್ಣ ಸಣ್ಣ ಮೀನುಗಳನ್ನು ಬಿಡುವುದು.

★ ಮನೆಯ ಕಿಟಕಿ ಬಾಗಿಲುಗಳಿಗೆ ಕೀಟ ತಡೆಗಟ್ಟುವ ಜಾಲರಿಗಳನ್ನು ಅಳವಡಿಸಿಕೊಳ್ಳಿ.

★ ಮಲಗುವಾಗ ತಪ್ಪದೇ ಸೊಳ್ಳೆ ಪರದೆಯನ್ನು ಉಪಯೋಗಿಸಿ.

★ ಸಂಜೆ ವೇಳೆ ಬೇವಿನ ಹೊಗೆ ಹಾಕುವುದು, ಸಾಮ್ರಾಣಿ ಧೂಪ ಹಾಕುವುದು ಹಾಗೂ ರಾತ್ರಿ ವೇಳೆ ಇತರ ಸೊಳ್ಳೆ ನಿರೋಧಕ ವಿಧಾನಗಳನ್ನು ಬಳಸಿ ಸೊಳ್ಳೆ ಕಡಿತದಿಂದ ದೂರವಿರಿ.

★ ಹರಿಯದೇ ನಿಂತ ನೀರು-ಸೊಳ್ಳೆ ಉತ್ಪತ್ತಿಯ ತವರು. ಮನೆಯ ಸುತ್ತ ಮುತ್ತ ನೀರು ನಿಲ್ಲದಂತೆ ಎಚ್ಚರ ವಹಿಸಿ ಸೊಳ್ಳೆಗಳ ಉತ್ಪತ್ತಿಯನ್ನು ತಡೆಗಟ್ಟಿರಿ.

ಶೀಘ್ರ ಪತ್ತೆ- ತ್ವರಿತ ಚಿಕಿತ್ಸೆಯಿಂದ ಸಾವು ನೋವುಗಳನ್ನು ತಡೆಗಟ್ಟಲು ಖಂಡಿತ ಸಾಧ್ಯ.

ಕರ್ನಾಟಕ ವಾರ್ತೆ

ದಲಿತ ಸ್ತ್ರೀವಾದದ ಅಗತ್ಯತೆ ಮತ್ತು ಪ್ರಸ್ತುತತೆ

- ಡಾ| ಶೈಲಜಾ ಹಿರೇಮಠ್

ಭಾರತವೂ ಸೇರಿದಂತೆ ಜಗತ್ತಿನ ಬೇರೆ-ಬೇರೆ ದೇಶಗಳಲ್ಲಿ ಸ್ತ್ರೀವಾದಗಳ ಕುರಿತು ಅನೇಕ ಬಗೆಯ ಚರ್ಚೆಗಳು ನಡೆಯುತ್ತಿವೆ. ಸ್ತ್ರೀವಾದಗಳ ಕುರಿತು ಎಷ್ಟು ಬಗೆಯ ಚರ್ಚೆಗಳಿವೆಯೋ ಅಷ್ಟು ಬಗೆಯ ಸ್ತ್ರೀವಾದ ಅಧ್ಯಯನ ಮಾದರಿಗಳಿವೆ. ಜಗತ್ತಿನ ಮಹಿಳಾ ಚಿಂತನೆಯ ಒಟ್ಟಾರೆ ಇತಿಹಾಸವನ್ನು ಗಮನಿಸಿದರೆ, ಅದರಲ್ಲಿ ಮಹಿಳೆಯರ ಬಹುರೂಪಿ ಕಥನಗಳಿವೆ.

ಸ್ತ್ರೀವಾದವನ್ನು ಪಶ್ಚಿಮದಿಂದ ಆಮದಾದ ವಿಚಾರವೆಂದು ಮೂಗು ಮುರಿಯುತ್ತಾರೆ. ನಾವು ಪಡೆಯುತ್ತಿರುವ ಶಿಕ್ಷಣ, ಮಾತನಾಡುತ್ತಿರುವ ಬಹುತೇಕ ಚಿಂತನೆಗಳು ಪಶ್ಚಿಮದಿಂದ ಆಮದಾಗಿದ್ದರೂ ಪುರುಷಶಾಹಿ ಧೋರಣೆಯುಳ್ಳ ಸುಶಿಕ್ಷಿತ ಗಂಡಸರಿಗೆ ಇವ್ಯಾವವೂ ಹೊರಗಿನಿಂದ ಬಂದ ವಿಚಾರಧಾರೆಗಳು ಎಂದೆನಿಸಿಲ್ಲ. ಸ್ತ್ರೀವಾದದ ಭೂಮಿಕೆಯಲ್ಲಿ ಹೊರಬರುತ್ತಿರುವ ಮಹಿಳಾ ಅಭಿವ್ಯಕ್ತಿಯನ್ನು ಮಟ್ಟಹಾಕಲು ಪಶ್ಚಿಮದ ವಿಚಾರಗಳೆಂದು ತಕರಾರು ಎತ್ತುತ್ತಾರೆ. ಆದರೆ ಈ ಎಲ್ಲ ಅಡೆತಡೆಗಳನ್ನು ಮೀರಿ ಇಂದು ಸ್ತ್ರೀವಾದಗಳು ವ್ಯಾಪಕವಾಗಿ ಬೆಳೆಯುತ್ತಿವೆ.

ವಸಾಹತುಶಾಹಿ ವಿರುದ್ಧದ ಹೋರಾಟದ ಸಂದರ್ಭದಲ್ಲಿ ವಸಾಹತುಶಾಹಿ ಶಿಕ್ಷಣದ ಪ್ರಭಾವಕ್ಕೊಳಗಾದ ಮೇಲ್ಜಾತಿಯ ಮಧ್ಯಮವರ್ಗದ ಪುರುಷರೇ ರಾಷ್ಟ್ರೀಯತೆಯ ಹೆಸರಿನಲ್ಲಿ ಭಾರತೀಯತೆಯನ್ನು ಕಟ್ಟಿಕೊಟ್ಟರು. ಮೇಲ್ಜಾತಿಯ ಮಧ್ಯಮವರ್ಗದ ಮಹಿಳೆಯರನ್ನು ಭಾರತೀಯ ಸಂಸ್ಕೃತಿಯ ರಕ್ಷಕಳನ್ನಾಗಿಯೇ ಚಿತ್ರಿಸಿದರು. ಆರಂಭದಲ್ಲಿ ಶಿಕ್ಷಣಕ್ಕೆ ಮೈತೆರೆದುಕೊಂಡವರೆಂದರೆ ಮೇಲ್ಜಾತಿಯ ಮಧ್ಯಮವರ್ಗದ ಮಹಿಳೆಯರು. ಇವರ ಎದುರಿಗೆ ಈಗಾಗಲೇ ತಮ್ಮ ಜಾತಿಯ ಪುರುಷರು ಕಟ್ಟಿಕೊಟ್ಟ ''ಭಾರತೀಯ ಮಹಿಳೆ' ಎನ್ನುವ ಏಕರೂಪದ ಮಾದರಿಯಿತ್ತು. ಅದನ್ನವರು ತಿರಸ್ಕರಿಸಲಿಲ್ಲ. ವೈದಿಕಶಾಹಿ ಸಂಸ್ಕೃತಿಯ ಭೂಮಿಕೆಯಲ್ಲಿ ಬೆಳೆದುಬಂದ ಈ ಮಹಿಳೆಯರು ತಮ್ಮ ಸಂಸ್ಕೃತಿಯ ಪ್ರಭಾವದಿಂದ ಹೊರಬಂದವರಲ್ಲ. ವೈದಿಕರು ಸಂಸ್ಕೃತಿಗಿರುವ ಬಹುತ್ವ ಆಯಾಮಗಳನ್ನು ಬದಿಗೆ ಸರಿಸಿ ತಮ್ಮ ಸಂಸ್ಕೃತಿಯನ್ನೇ ಇಡೀ ದೇಶದ ಸಂಸ್ಕೃತಿಯೆನ್ನುವಂತೆ ಚಿತ್ರಿಸುತ್ತಾರೆ. ಮೇಲ್ಜಾತಿಯ ಮಧ್ಯಮವರ್ಗದ ಸ್ತ್ರೀವಾದಿಗಳೂ ಅಷ್ಟೇ. ತಮ್ಮ ಸಮಸ್ಯೆಯನ್ನು ದೇಶದ ಇಡೀ ಮಹಿಳಾ ಸಮಸ್ಯೆ ಎನ್ನುವಂತೆ ಚಿತ್ರಿಸುತ್ತಾರೆ. ಸಮಾಜದ ಅಂಚಿನಲ್ಲಿ ಅತಂತ್ರವಾಗಿ ಬದುಕುತ್ತಿರುವ ದಲಿತ ಮಹಿಳೆಯರ ಬಗ್ಗೆ ಮಾತನಾಡುವುದನ್ನು ಅವರಿಗರಿವಿಲ್ಲದಂತೆಯೇ ಮರೆತುಬಿಟ್ಟಿರುತ್ತಾರೆ.

''ಗಂಡಸರ ಯಜಮಾನ್ಯ ಮತ್ತು ಹೆಂಗಸರ ಅಧೀನತೆ ಅನ್ನುವುದು ಭಾರತದಲ್ಲಿ ಎಲ್ಲ ಆಸ್ತಿ ಸಂಬಂಧಗಳನ್ನು ನಿಯಂತ್ರಿಸುತ್ತದೆ. ಸರಕಾರದ ಮತ್ತು ಕಾನೂನುಗಳು ಇದನ್ನು ಅನುಮೋದಿಸುತ್ತದೆ. ಉದಾಹರಣೆಗೆ ವಿವಾಹಿತ ಸ್ತ್ರೀಯೊಬ್ಬಳು ಗಂಡನ ಅನುಮತಿ ಇಲ್ಲದೆ ಪಾಸ್ ಪೋರ್ಟ್‌ಗೆ ಅರ್ಜಿಹಾಕುವುದು ಹೆಚ್ಚು ಕಡಿಮೆ ದುಸಾಧ್ಯ. ಇದೇ ತರಹ ಗಂಡ ಜೀವಂತವಾಗಿದ್ದು ಹೆಂಡತಿ ಇರುವ ಊರಿನಲ್ಲೇ ಇದ್ದರೆ ಪಡಿತರ ಚೀಟಿಯನ್ನು ಗಂಡನ ಹೆಸರಿನಲ್ಲಿ ಮಾತ್ರ ಕೊಡುತ್ತಾರೆ. ಸಾಮಾಜಿಕ ಜೀವನದ ಗಂಡನ ಹೆಸರಿನ ಹಂಗಿಲ್ಲದೆ ಹೆಂಗಸರು ತಾನು ಸ್ವತಂತ್ರವಾಗಿ ರೂಪಿಸಿಕೊಳ್ಳಬಲ್ಲ ಸಂಬಂಧವಾಗಲಿ, ಕರಾರಾಗಲಿ ಇಲ್ಲವೇ ಇಲ್ಲ ಅನ್ನಬಹುದು'' (ಮಧುಕೀಶ್ವರ್ : 1997; ಪು. 28-29) ಎಂದು ಹೇಳುವ ಭಾರತದ ಬಹುಪಾಲು ಸ್ತ್ರೀವಾದಿಗಳು ವರದಕ್ಷಿಣೆ, ಮದುವೆ, ಉದ್ಯೋಗ, ಆಸ್ತಿಹಕ್ಕು, ಅಭಿವ್ಯಕ್ತಿ ಸ್ವಾತಂತ್ರ್ಯ, ವಿಚ್ಛೇದನ ಮೊದಲಾದ ಸಮಸ್ಯೆಗಳನ್ನು ಇಡೀ ಭಾರತದ ಮಹಿಳೆಯರ ಸಮಸ್ಯೆಗಳನ್ನಾಗಿ ಚಿತ್ರಿಸುತ್ತಾರೆ. ಅವರು ದಲಿತ ಮಹಿಳೆಯರ ಬಗ್ಗೆ ಮಾತನಾಡಿದ್ದು ಕಡಿಮೆ. ನಿತ್ಯ ದುಡಿಮೆ ಅರೆಹೊಟ್ಟೆ ಉಣ್ಣುವ, ಅಂಗೈ ಅಗಲ ಜಾಗದಲ್ಲಿ ಮಲಗುವ ದಲಿತ ಮಹಿಳೆಗೆ ಆಸ್ತಿ ಹಕ್ಕಿನ ಪರಿಕಲ್ಪನೆ ಎಲ್ಲಿಂದ ಬರಬೇಕು? ಕಟ್ಟಿಕೊಂಡ ಗಂಡ, ಮಕ್ಕಳನ್ನು ಹುಟ್ಟಿಸಿ ಎಲ್ಲಿಯೋ ಹೋಗಿಬಿಟ್ಟಿರುತ್ತಾನೆ. ಮಕ್ಕಳಿಗಾಗಿ ನಿತ್ಯವೂ ತಿರುದುಣ್ಣುವ ಅವಳಿಗೆ ವಿಚ್ಛೇದನ ಎನ್ನುವ ಮಾತೇ ಅಪರಿಚಿತ. ಶಿಕ್ಷಣ, ರಾಜಕೀಯ ಮೀಸಲಾತಿ, ಆರ್ಥಿಕ ಸಬಲೀಕರಣ ಈ ಯಾವ ಪರಿಕಲ್ಪನೆಗಳು ಅವಳ ಪರಿಚಯದ ಪರಿಧಿಗೆ ಬಂದಿಲ್ಲ. ಅಶ್ಲೀಲ ಜಾಹಿರಾತಿನ ವಿರುದ್ಧ ಪ್ರತಿಭಟಿಸುವ ಸ್ತ್ರೀವಾದಿಗಳು ಸಾರ್ವಜನಿಕರ ಎದುರಿನಲ್ಲೇ ಮೇಲ್ಜಾತಿಯ ಪುರುಷರಿಂದ ನಿತ್ಯ ಬೆತ್ತಲಾಗುತ್ತಿರುವ ದಲಿತ ಮಹಿಳೆಯ ಅಳಲನ್ನು ಕೇಳಿಸಿಕೊಳ್ಳಬೇಕಿದೆ.

ಕೌಟುಂಬಿಕವಾಗಿ ಸುರಕ್ಷಿತವಾಗಿದ್ದು, ಸಾಮಾಜಿಕ ಸ್ಥಾನಮಾನವನ್ನು ಅನುಭವಿಸುತ್ತಿರುವ ಮಹಿಳೆಯರು ಕಟ್ಟುವ ಸ್ತ್ರೀವಾದವು ಒಂದು ಮಿತಿಯನ್ನು ಕಾಯ್ದುಕೊಂಡಿದೆ. ಬಹುಪಾಲು ಸ್ತ್ರೀವಾದಿಗಳು ಕೌಟುಂಬಿಕ ವ್ಯವಸ್ಥೆಯೊಳಗಿನ ಪುರುಷ ಪ್ರಾಧಾನ್ಯತೆಯ ವಿರುದ್ಧ ಕೆಂಡಕಾರುತ್ತಾರೆ. ''ಊಟ ಬಡಿಸುವಾಗಿನ ತಾರತಮ್ಯಕ್ಕೂ ಪೂರಕವಾದ ಹಲವು ಜನಪದ

ನಂಬಿಕೆಗಳಿವೆ. ಇರುವ ಆಹಾರದಲ್ಲಿ ಉತ್ಕೃಷ್ಟವಾದ ಭಾಗವನ್ನು ಮಗನಿಗೋಸ್ಕರ ತೆಗೆದಿಟ್ಟು ಉಳಿದ ಭಾಗವಷ್ಟೇ ಮಗಳಿಗೆ ನೀಡುತ್ತಾಳೆ. ಉಡಿಗೆ ತೊಡಿಗೆಗಳ ವಿಷಯದ ತಾರತಮ್ಯವೂ ಬಾಲ್ಯದಿಂದಲೇ ಪ್ರಾರಂಭ. ಗಂಡು ಹುಡುಗ ಬಿಗಿಯಾದ ಚಲನವಲನಗಳಿಗೆ ಅನುಕೂಲವಾದ ಚಲ್ಲಣ ಧರಿಸಿದರೆ, ಹುಡುಗಿಗೆ ತುಂಬುನಿರಿಗೆಯ ಲಂಗಗಳು ರಭಸವಾಗಿ ನಡೆದರೆ ಎಡವುವಂಥ ಜಿಗಿದು ನೆಗೆದು ಆಡಲಾಗದ ಉಡುಗೆಗಳನ್ನು ಒದಗಿಸಲಾಗುತ್ತದೆ. ಊಟದಲ್ಲಷ್ಟೇ ಅಲ್ಲ ಆಟದಲ್ಲೂ ಹೀಗೆ...'' (ಧರಣಿದೇವಿ ಮಾಲಗತ್ತಿ : 1998; ಪು. 114) ಇವುಗಳಲ್ಲದೆ ಮಹಿಳೆಯಾಗಿದ್ದ ಕಾರಣಕ್ಕೆ ವೇದವನ್ನೋದುವ ಅವಕಾಶದಿಂದ ವಂಚಿತವಾದದ್ದು, ಮುಟ್ಟನ್ನು ಮೈಲಿಗೆಯನ್ನಾಗಿ ಪರಿಗಣಿಸಿದ್ದುದು, ಮನೆಗೆಲಸಕ್ಕೆ ಮೌಲ್ಯವಿಲ್ಲದ್ದುದು, ಮೊದಲಾದವುಗಳನ್ನು ಚರಿತ್ರೆಯಲ್ಲಿ ತಮ್ಮ ಮೇಲೆ ನಡೆದ ಹಾಗೂ ವರ್ತಮಾನದಲ್ಲಿ ಮುಂದುವರೆಯುತ್ತಿರುವ ಬಹುದೊಡ್ಡ ಅನ್ಯಾಯಗಳೆಂದು ನಿರ್ವಚಿಸುತ್ತಾರೆ. ಮತ್ತು ಅದಕ್ಕಾಗಿ ವಿಷಾದ ಪಡುತ್ತಾರೆ. ಹೀಗೆ ಮೇಲುಜಾತಿ ಮಹಿಳೆಯರು ತಮ್ಮ ಬವಣೆಗಳನ್ನೇ ಕೇಂದ್ರವಾಗಿರಿಸಿಕೊಂಡು ಸ್ತ್ರೀವಾದವನ್ನು ಕಟ್ಟುತ್ತಾರೆ. ವಿಷಾದದ ಸಂಗತಿಯೆಂದರೆ ಅಲ್ಲಿ ದಲಿತ ಹಾಗೂ ಬುಡಕಟ್ಟು ಸ್ತ್ರೀಯರು ಇರುವುದೇ ಇಲ್ಲ.

ಪ್ರಧಾನ ಧಾರೆಯಲ್ಲಿರುವ ಸ್ತ್ರೀವಾದಿಗಳು ಶಿಕ್ಷಣ, ಉದ್ಯೋಗ, ರಾಜಕೀಯ ಮೀಸಲಾತಿಯ ಸಾಮಾಜಿಕ ಸಂಗತಿಗಳ ಕುರಿತು ಮಾತನಾಡಿದರೂ ಅವರಿಗರಿವಿಲ್ಲದಂತೆಯೇ ದಲಿತ ಮಹಿಳೆಯರನ್ನು ಕೈಬಿಟ್ಟಿರುತ್ತಾರೆ. ಮೇಲ್ಜಾತಿಯ ಮಧ್ಯಮವರ್ಗದ ಸ್ತ್ರೀಯರನ್ನು ಕೇಂದ್ರವಾಗಿರಿಸಿಕೊಂಡು ಬೆಳೆಸಿದ ಚಿಂತನೆಗೆ ಸಾರ್ವತ್ರಿಕ ಸ್ವರೂಪವನ್ನು ಲೇಪಿಸುತ್ತಾರೆ. ಸಾಮಾಜಿಕವಾಗಿ ಅತ್ಯಂತ ಕೆಳಸ್ತರದಲ್ಲಿದ್ದು ದಾರಿದ್ರ್ಯತೆಯಿಂದ ಬಳಲುತ್ತಿರುವ, ಅಕ್ಷರ ಲೋಕವನ್ನೇ ಅರಿಯದ ದಲಿತ ಮಹಿಳೆಯರ ಕಷ್ಟನಷ್ಟಗಳನ್ನು, ಮಾನಾಪಮಾನಗಳನ್ನು ಕನಿಷ್ಠ ಪಕ್ಷ ಕೇಳಿಸಿಕೊಳ್ಳುವ ಸೌಜನ್ಯವನ್ನು ತೋರುವುದಿಲ್ಲ. ಹೀಗಾಗಿ ಮೇಲ್ಜಾತಿಯ ಸ್ತ್ರೀವಾದಿಗಳಿಗೆ ಮಹಿಳೆಯ ಶೋಷಣೆಯ ಒಳಹರಿವುಗಳು ಕೈಗೆಟುಕದೇ ಹೋಗಿಬಿಡುತ್ತದೆ.

ರ್‍ಯಾಡಿಕಲ್ ಎಂದೆನಿಸಿಕೊಂಡ ಕೆಲವು ಸ್ತ್ರೀವಾದಿಗಳು ಶೂದ್ರ ಮಹಿಳೆಯ ಕುರಿತು ಅಲ್ಲಲ್ಲಿ ಕೆಲವು ಮಾತುಗಳನ್ನಾಡಿದ್ದಾರೆ. ಉಮಾ ಚಕ್ರವರ್ತಿಯವರು 'ವ್ಹಾಟ್ ಎವರ್ ಹ್ಯಾಪನ್ಡ್ ಟು ದ ವೈದಿಕ್ ದಾಸಿ' ಎನ್ನುವ ಲೇಖನದಲ್ಲಿ ಕೊನೆಯಲ್ಲಿ ಹೇಳಿದ ಮಾತುಗಳನ್ನು ಗಮನಿಸಬೇಕು. ''ಸಮಾಜದ ಮೇಲ್ವರ್ಗಗಳ ಬಗೆಗೆ ಮಾತ್ರ ಗಮನವಿಟ್ಟು ಇನ್ನೆಲ್ಲರನ್ನೂ ನಿರ್ಲಕ್ಷಿಸುವ ಈ ಗುಣ ದಯಾನಂದ ಅವರ ಅಭಿಪ್ರಾಯಗಳಲ್ಲೂ ಕಾಣುತ್ತದೆ. 'ಆರ್ಯ ತಾಯಿಯರು ತಮ್ಮ ಮಕ್ಕಳ ಪೋಷಣೆಯನ್ನು ಮಾಡಬಾರದು. ಬದಲಾಗಿ ಅವರನ್ನು ದಾದಿಯರ ಕೈಗೊಪ್ಪಿಸಿ, ತಾವು ತಮ್ಮ ಆರೋಗ್ಯವನ್ನು ಸರಿಪಡಿಸಿಕೊಳ್ಳಬೇಕು. ಏಕೆಂದರೆ ಮತ್ತೆ ಅವರು ಬಲಿಷ್ಠ ಪುತ್ರರನ್ನು ಹೇರುವುದಕ್ಕೆ ತಯಾರಾಗಬೇಕಾಗುತ್ತದೆ.' ಹಾಗಾದರೆ ದಾದಿಯರ ಗತಿಯೇನು? ಅವಳು ಯಾರು? ಸಂತಾನೋತ್ಪತ್ತಿಯ ವ್ಯವಸ್ಥೆಯಲ್ಲಿ ಅವಳ ಪಾತ್ರವೇನು? ಅವಳು ಬಲಿಷ್ಠ ಪುತ್ರರರನ್ನು ಹೆರಬೇಕಾಗಿಲ್ಲವೆ? ಇಲ್ಲಿ ದಯಾನಂದ ಅವರು ಒಂದು ವರ್ಗದ ಖರ್ಚಿನಲ್ಲಿ ಇನ್ನೊಂದು ವರ್ಗಕ್ಕೆ ಲಾಭ ಮಾಡಿಕೊಡುತ್ತಿರುವುದು ಸ್ಪಷ್ಟವಾಗಿದೆ. 19ನೇ ಶತಮಾನದ ರಾಷ್ಟ್ರೀಯವಾದಿಗಳ ಮಟ್ಟಿಗೆ ಬಹಳಷ್ಟು ವರ್ಗಗಳ ಹೆಂಗಸರು ಅಸ್ತಿತ್ವದಲ್ಲೇ ಇರಲಿಲ್ಲ. ವೈದಿಕ ಸುವರ್ಣ ಯುಗದಲ್ಲಿ ವೈದಿಕ ದಾಸಿ ಮತ್ತು ಅವಳಂತವರಿಗೆ ಯಾವ ಹಕ್ಕುಗಳಿದ್ದವು ಎಂಬುದರ ಬಗೆಗೆ ತಿಳಿದುಕೊಳ್ಳು ಯಾರೂ ಪ್ರಯತ್ನಿಸಲಿಲ್ಲ.'' (ಉಮಾ ಚಕ್ರವರ್ತಿ, ಉದ್ಧೃತ : ಮನುಚಕ್ರವರ್ತಿ : 1999, ಪು. 91-92) ಶೂದ್ರ ಮಹಿಳೆಯರು ಕುರಿತು ಉಮಾಚಕ್ರವರ್ತಿ ಅವರಿಗೆ ಇರುವ ಕಾಳಜಿ ಕಕ್ಕುಲಾತಿಯನ್ನು ಗೌರವಿಸಬೇಕಿದೆ. ನಮ್ಮ ಚಿಂತನೆಗೆ ಈ ಬಗೆಯ ವಿಚಾರಧಾರೆಯನ್ನು ಮಾದರಿಯಾಗಿಟ್ಟುಕೊಳ್ಳಬೇಕಿದೆ. ಶೂದ್ರ ಮಹಿಳೆಯರ ಜೊತೆಜೊತೆಗೆ ಅತ್ಯಂತ ತಿರಸ್ಕಾರಕ್ಕೆ ಒಳಗಾದಂತಹ ಪಂಚಮ ಸ್ತ್ರೀಯರ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳುವುದಕ್ಕೆ ಹೆಚ್ಚಿನ ಆದ್ಯತೆ ನೀಡಬೇಕಿದೆ. ನಮ್ಮ ಇವತ್ತಿನ ಸ್ತ್ರೀವಾದಿ ಅಧ್ಯಯನವು ದಲಿತರಲ್ಲಿ ದಲಿತರಾದ ಪಂಚಮ ಮಹಿಳೆಯರತ್ತ ಸಾಗಬೇಕಿದೆ. ಅವರ ಮೇಲೆ ನಡೆಯುತ್ತಿರುವ ಶೋಷಣೆಗಳತ್ತ ಗಮನಹರಿಸುವ ಅಗತ್ಯವಿದೆ.

ನಮ್ಮ ಭಾರತದಲ್ಲಿ ಪಿತೃಪ್ರಧಾನ ವ್ಯವಸ್ಥೆಯೆನ್ನುವುದು ಏಕರೂಪಿಯಾಗಿಲ್ಲ. ಆಯಾ ಜಾತಿ, ಧರ್ಮಕ್ಕನುಗುಣವಾಗಿ ಪಿತೃಪ್ರಧಾನ ವ್ಯವಸ್ಥೆಗಳು ಬೇರೆ ಬೇರೆ ಸ್ವರೂಪ ಹಾಗೂ ಸಂರಚನೆಯನ್ನು ಹೊಂದಿವೆ. ಜಾತಿಗೊಂಡ ಪಿತೃಪ್ರಧಾನ ವ್ಯವಸ್ಥೆಗಳ ಹುನ್ನಾರಗಳನ್ನು ಅರ್ಥಮಾಡಿಕೊಳ್ಳಬೇಕಾದರೆ ಆಯಾ ಜಾತಿಗಳ ನೆಲೆಗಳಲ್ಲಿಯೇ ಸ್ತ್ರೀವಾದಗಳು ಹುಟ್ಟಿಕೊಳ್ಳಬೇಕಿದೆ. ವೈದಿಕ ಸ್ತ್ರೀವಾದದಂತೆ, ದಲಿತ ಹೆಣ್ಣು ಮಕ್ಕಳು ದಲಿತ ಸ್ತ್ರೀವಾದವನ್ನು ಶೂದ್ರ ಮಹಿಳೆಯರು, ಶೂದ್ರ ಸ್ತ್ರೀವಾದವನ್ನು ಕಟ್ಟಿಕೊಳ್ಳುವ ಅಗತ್ಯವಿದೆ. ಹಾಗೆ ಮುಸ್ಲಿಂ ಸ್ತ್ರೀವಾದ, ಕ್ರಿಶ್ಚಿಯನ್ ಸ್ತ್ರೀವಾದ, ಜೈನ ಸ್ತ್ರೀವಾದ ಮೊದಲಾದ ಸ್ತ್ರೀವಾದಗಳು ರೂಪ ಪಡೆಯಬೇಕಿದೆ.

ಎರಡು ಮೂರು ತಲೆಮಾರುಗಳಿಗೆ ಮೀಸಲಾತಿ ಪಡೆದ

ದಲಿತ ಮಹಿಳೆಯ ಸಮಸ್ಯೆಗಳ ಸ್ವರೂಪ ಬೇರೆಯಾಗಿದ್ದರೆ, ಮೀಸಲಾತಿ ಪಡೆಯದೇ ಇರುವ ದಲಿತ ಮಹಿಳೆಯ ಸ್ವರೂಪವೇ ಬೇರೆ. ಮೀಸಲಾತಿ ಸವಲತ್ತನ್ನು ಹೊಂದದೆ ಇರುವ ದಲಿತ ಮಹಿಳೆಯರು ಜಾತಿಗೊಂಡ ಊಳಿಗಮಾನ್ಯಶಾಹಿ ಪಿತೃಪ್ರಧಾನ ವ್ಯವಸ್ಥೆಯನ್ನು ಎದುರಿಸುತ್ತಿದ್ದಾಳೆ.

ಅದಕ್ಕಾಗಿ ದಲಿತ ಮಹಿಳೆ ಎಂದ ತಕ್ಷಣ ಏಕರೂಪ ಮಾದರಿಯನ್ನಾಗಿ ಗ್ರಹಿಸುವುದು ಅಪಾಯಕಾರಿಯಾಗುತ್ತದೆ. ಹೀಗಾಗಿ ದಲಿತ ಎನ್ನುವ ಪದವನ್ನು ಅತ್ಯಂತಿಕವಾಗಿ ಬಳಸದೇ ವಿಶ್ಲೇಷಣಾತ್ಮಕ ಪರಿಕಲ್ಪನೆಯನ್ನಾಗಿ ಬಳಸುವುದು ಸೂಕ್ತವೆನಿಸುತ್ತದೆ. ಪ್ರಮುಖವಾಗಿ ಮೀಸಲಾತಿ ಪಡೆಯದೇ ಇರುವ ಮಹಿಳೆಯರನ್ನು ಕೇಂದ್ರವಾಗಿರಿಸಿಕೊಂಡೇ ಈ ಲೇಖನ ರೂಪುಗೊಂಡಿದೆ.

"ಆಳದಲ್ಲಿ ಎಲ್ಲ ಜಾತಿಗಳ ಮಹಿಳೆಯರ ಸಮಸ್ಯೆಗಳು ಒಂದೇ ಎಂದು ತಾತ್ವಿಕವಾಗಿ ನಾವು ಒಪ್ಪಿಕೊಂಡರೂ ಇದು ಮಾತಿನಲ್ಲಿ ಕಂಡಂತೆ ಬದುಕಿನಲ್ಲಿ ಕಾಣಲಾರದು. ಜಾತಿನಾಶವಾಗಬೇಕು ಎಂದು ದಲಿತ ಮಹಿಳೆ ಅಂದಾಗ ಅದರಾಳಕ್ಕಿರಬಹುದಾದ ತಲ್ಲಣ, ಆಕ್ರೋಶ, ಅವಮಾನ, ನೋವು ಹಾಗೂ ಆರ್ದ್ರತೆ ಅದೇ ಬ್ರಾಹ್ಮಣ ಹೆಣ್ಣು ಮಗಳು ಅದೇ ಮಾತನ್ನು ಜಾತಿಯ ಬಗ್ಗೆ ಹೇಳುವಾಗ ಅಂತಾದ್ದೇ ರೀತಿಯಲ್ಲಿ ಅಭಿವ್ಯಕ್ತವಾಗುತ್ತದೆಂದು ಹೇಳಲಾಗದು. ವಿಚಿತ್ರ ಎಂದರೆ ಭಾರತೀಯ ಜಾತಿ ಪರಂಪರೆ ಮಹಿಳಾ ಸಮಾಜಕ್ಕೂ ಬಡಿದು ಅದು ಅವರವರನ್ನು ಮಾತ್ರ ಪ್ರಧಾನವಾಗಿ ಕಂಡುಕೊಂಡು ಅವರಲ್ಲದೆ ಹೊರಗಿನವರನ್ನು ದೂರವಾಗಿಯೇ ಕಾಣುವಂತೆ ಮಾಡಿದೆ. ಭಾರತದ ಉದ್ದಕ್ಕೂ ಇರುವ ಇಂತಹ ಅಸಮಾನ ಜಾತಿ ಮನಸ್ಸು ಮಹಿಳಾ ವಾದವನ್ನು ಬಿಚ್ಚಿಕೊಳ್ಳದಂತೆ ಮಾಡಿದೆ". (ಮೊಗಳ್ಳಿ ಗಣೇಶ್ : 1998, ಪು. 3-4) ಸಂಕುಚಿತವಾಗಿ ಬೆಳೆಯುತ್ತಿರುವ ಸ್ತ್ರೀವಾದವು ಮೈಚಳಿಬಿಟ್ಟು ನಿಜವಾದ ಅರ್ಥದಲ್ಲಿ ವಿಸ್ತಾರತೆಯನ್ನು ಪಡೆದುಕೊಳ್ಳಬೇಕಾದರೆ ದಲಿತ ಮಹಿಳೆಯ ಮೇಲೆ ನಡೆಯುವ ಶೋಷಕ ಸಂರಚನೆಯನ್ನು ಗುರುತಿಸಬೇಕಿದೆ. ಮೇಲ್ಜಾತಿಯ ಹಾಗೂ ಮಧ್ಯಮ ಜಾತಿಗೆ ಸೇರಿದ ನಮ್ಮಂಥ ಮಹಿಳೆಯರು ಬೀದಿ-ಬೀದಿಗಳಲ್ಲಿ ಬೆತ್ತಲೆ ಮಾರಾಟವಾದ ಮಹಿಳಾ ಗುಲಾಮರ ಬದುಕಿನ ಚರಿತ್ರೆಯನ್ನು ಅರ್ಥಮಾಡಿಕೊಳ್ಳುವ ಒತ್ತಡವನ್ನು ನಿರ್ಮಿಸಿಕೊಳ್ಳಬೇಕಿದೆ. ವಿದೇಶಿ ಪ್ರವಾಸಿಗರು ಮಹಿಳಾ ಗುಲಾಮರ ದಾರುಣಸ್ಥಿತಿಯನ್ನು ವಿವರಿಸಿದ್ದಾರೆ. ಸ್ಟ್ರಾಬೋ "ಬಡತನದಲ್ಲಿ ತಮ್ಮ ಹೆಣ್ಣು ಮಕ್ಕಳನ್ನು ಮದುವೆ ಮಾಡಲು ಸಾಧ್ಯವಿಲ್ಲದವರು ಅವರನ್ನು ಪೇಟೆಯಲ್ಲಿ ಮಾರಾಟ ಮಾಡುತ್ತಿದ್ದರು. ಶಂಖ ಊದಿ ಡಂಗುರ ಹೊಡೆದರೆ ಜನ ನೆರೆಯುತ್ತಿದ್ದರು. ಕೊಂಡುಕೊಳ್ಳುವವರು ಬೆತ್ತಲೆ ಬೆನ್ನು ಭುಜಗಳನ್ನು ಪರೀಕ್ಷಿಸಿ ತನಗೆ ಒಪ್ಪಿಗೆಯಾದ ಆಕೆಯನ್ನು ಕೊಂಡುಕೊಂಡುತನ್ನ ಸಂಗಾತಿಯನ್ನಾಗಿ ಮಾಡಿಕೊಳ್ಳುತ್ತಿದ್ದರು. ಸತ್ತವರನ್ನು ರಣಹದ್ದುಗಳಿಗೆ ಬಿಸಾಡುತ್ತಿದ್ದರು" (ಸ್ಟ್ರಾಬೋ : 1964, ಪು. 64) ಎಂದು ಹೇಳಿದರೆ, ವಾಸ್ಕೊದ ಗಾಮಾ ಮತ್ತಿತರರು "ಗುಲಾಮರನ್ನು ಪ್ರಾಣಿಗಳಂತೆ ಕೊಲ್ಲುವುದು ಮಾರುವುದು ನಡೆಯುತ್ತಿತ್ತು. ಗೋವೆಯ ಚೌಕದಲ್ಲಿ ಹೆಂಗಸರನ್ನು ಗಂಡಸರನ್ನು ಬೆತ್ತಲೆ ನಿಲ್ಲಿಸಿ ಹರಾಜು ಮಾಡುತ್ತಿದ್ದರು. ಕನ್ಯೆಯೆಂದು ಹೇಳಿಕೊಂಡು ಬಂದವಳನ್ನು ಕನ್ಯೆಯೇ ಅಲ್ಲವೆ ಎಂಬುದನ್ನು ಹೆಂಗಸರ ಮೂಲಕ ಪರೀಕ್ಷೆ ಮಾಡಿಸಿದ ಮೇಲೆ ಕೊಂಡುಕೊಂಡು ಇಟ್ಟುಕೊಳ್ಳುತ್ತಿದ್ದರು" (ವಾಸ್ಕೋದ ಗಾಮಾ : 1966, ಪು. 241) ಎಂದಿದ್ದಾರೆ. ಜಾತಿಕಾರಣದಿಂದಾಗಿಯೇ ಕೌಟುಂಬಿಕ ಚೌಕಟ್ಟಿನೊಳಗೆ ಈ ಸಮಾಜದಲ್ಲಿ ಸುರಕ್ಷಿತವಾಗಿರುವ ಮೇಲ್ಜಾತಿಯ ಸ್ತ್ರೀಯರಿಗೆ ದಲಿತ ಮಹಿಳೆಯರಿಗಿದ್ದಂತೆ ಈ ಬಗೆಯ ದುರಂತ ಚರಿತ್ರೆಯಿಲ್ಲ. ಪ್ರಧಾನ ಧಾರೆಯಲ್ಲಿರುವ ಸ್ತ್ರೀವಾದಿಗಳು ತಮ್ಮ ಮೇಲೆ ನಡೆಯುತ್ತಿರುವ ಶೋಷಣೆಗಳನ್ನು ಹಾಗೂ ಶೋಷಕ ವ್ಯವಸ್ಥೆಯ ಸಂರಚನೆಗಳನ್ನು ಗುರುತಿಸಿ ಪ್ರತಿಭಟಿಸುವಷ್ಟು ಪ್ರಜ್ಞಾವಂತರಾಗಿದ್ದಾರೆ. ದಲಿತಳಾಗಿ ಹುಟ್ಟಿದ್ದು ಪಾಪವಾಗಿ, ಬಾಳಿನುದ್ದಕ್ಕೂ ನರಕಯಾತನೆಯನ್ನು ಅನುಭವಿಸುತ್ತಿದ್ದರೂ, ತನ್ನ ಮೇಲೆ ದೌರ್ಜನ್ಯ, ದಬ್ಬಾಳಿಕೆ ನಡೆಯುತ್ತಿದೆ ಎನ್ನುವುದರ ಪರಿವೆ ಇಲ್ಲದೆ ಅಮಾಯಕಳಾಗಿ ಬದುಕುತ್ತಿದ್ದಾಳೆ. ಜೀವಂತ ಶವವಾಗಿರುವ ದಲಿತ ಮಹಿಳೆಯರ ಅಸಹಾಯಕತೆಯನ್ನು, ನೋವಿನ ಒಳದನಿಗಳನ್ನು ಎಲ್ಲ ಮಹಿಳೆಯರು ಮೊದಲು ಕೇಳಿಸಿಕೊಳ್ಳಬೇಕಿದೆ. ಶೂದ್ರಳಾಗಿ ನಾನು ಅನೇಕ ಬಗೆಯ ಶೋಷಣೆಗಳಿಗೆ ಒಳಗಾಗಿದ್ದೇನೆ, ಒಳಗಾಗುತ್ತಿದ್ದೇನೆ. ನನಗಿಂತಲೂ ಭೀಕರ ಗಾಢಾಂಧಕಾರದಲ್ಲಿ ಕೊಳೆಯುತ್ತಿರುವ ದಲಿತ ಮಹಿಳೆಯ ಅಪಮಾನಗಳನ್ನು ಆಪ್ತವಾಗಿ ಆಲಿಸುವುದು ಮುಖ್ಯವೆನಿಸುತ್ತದೆ. ಎಲ್ಲ ಮಹಿಳೆಯರೂ ದಲಿತರೇ ನಿಜ. ಆದರೆ ಯಾರ ನೋವು ಮೊದಲು, ಯಾರ ಅಪಮಾನ ಮೊದಲು, ಈ ದೇಶದಲ್ಲಿ ಮೊದಲು ಯಾರು ಅಕ್ಷರಲೋಕಕ್ಕೆ ಒಳಗಾದರು ಈ ಪ್ರಶ್ನೆ ಇವತ್ತು ಪ್ರಸ್ತುತ. ಮಹಿಳೆಯರಾದ ನಾವೆಲ್ಲರೂ ಅಪಮಾನಗಳಿಗೆ, ಹಿಂಸೆಗಳಿಗೆ, ಶೋಷಣೆಗಳಿಗೆ ಒಳಗಾದವರಾದರೂ ನಮ್ಮೊಳಗೆ ಅತ್ಯಂತ ಹಿಂಸೆಗೆ ಒಳಗಾದ ದಲಿತ ಮಹಿಳೆಯರ ಅಪಮಾನಗಳನ್ನು ನಮ್ಮ ಕಣ್ಣುಗಳಿಂದಲೇ ನಿಚ್ಚಳವಾಗಿ ನೋಡಬೇಕಿದೆ, ನಮ್ಮ ಕಿವಿಗಳಿಂದಲೇ ಪ್ರಾಮಾಣಿಕವಾಗಿ ಆಲಿಸಬೇಕಿದೆ, ನಮ್ಮ ಹೃದಯಾಂತರಾಳದಿಂದಲೇ ಮಾನವೀಯತೆಯ ದೀಪದ

ಬೆಳಕಲ್ಲಿ ಅವರ ನೋವುಗಳನ್ನು ಗ್ರಹಿಸಬೇಕಿದೆ, ನಮ್ಮ ಕಿವಿಗಳಿಂದಲೇ ಪ್ರಾಮಾಣಿಕವಾಗಿ ಆಲಿಸಬೇಕಿದೆ, ನಮ್ಮ ಹೃದಯಾಂತರಾಳದಿಂದಲೇ ಮಾನವೀಯತೆಯ ದೀಪದ ಬೆಳಕಲ್ಲಿ ಅವರ ನೋವುಗಳನ್ನು ಗ್ರಹಿಸಬೇಕಿದೆ. ಅತ್ಯಂತ ಕ್ರೂರವಾದ ಭಾರತೀಯ ಜಾತಿ ವ್ಯವಸ್ಥೆಗಳಲ್ಲಿ ಕೊನೆ ಅಂಚಿನಲ್ಲಿರುವ ಮಹಿಳೆಯರು ಜಾತಿಯ ಶಾಪದ ಜೊತೆಗೆ ಲಿಂಗ, ವರ್ಗ ಹಾಗೂ ವರ್ಣದ ಕಾರಣಗಳಿಂದಾಗಿ ಪುರುಷ ವಿಕಾರಗಳನ್ನು ಅಸಹಾಯಕತೆಯಿಂದ ಎದುರಿಸುತ್ತಿದ್ದಾರೆ. ಇವತ್ತಿನ ನಮ್ಮಂತಹ ವಿದ್ಯಾವಂತ, ಆಧುನಿಕ ಮಹಿಳೆಯರಿಗೆ ಹೊಸ ಬಗೆಯ ಆಲೋಚನೆ ಮಾಡುವಂಥವರಿಗೆ ಯಾವುದು ತಿರಸ್ಕೃತಿವಾಗಿತ್ತೊ ಅದೇ ಪ್ರಧಾನ ಆಕರವಾಗಬೇಕು. ಭಾರತೀಯ ಸಂಸ್ಕೃತಿಗಳಲ್ಲಿ ನಿರ್ಲಕ್ಷಕ್ಕೆ ಒಳಗಾದವರನ್ನು ದಬ್ಬಾಳಿಕೆಗೆ ಬಲಿಯಾದವರನ್ನು ಇಟ್ಟುಕೊಂಡೇ ನಮ್ಮ ಅಧ್ಯಯನ ಸಾಗಬೇಕಿದೆ. ಮೇಲ್ಜಾತಿಯವರು ಸೃಷ್ಟಿಸಿದ ಜಾತಿ ಶ್ರೇಣಿಕರಣವನ್ನಿಟ್ಟುಕೊಂಡೇ ಮಹಿಳಾ ಸ್ಥಿತಿಗಳನ್ನು ಅವಲೋಕನ ಮಾಡಬೇಕಿದೆ. ಯಾವ ಯಾವ ಜಾತಿಗಳು, ಯಾವ ಯಾವ ಶ್ರೇಣಿಯಲ್ಲಿದ್ದವು, ಯಾವುವು ಅಧಿಕೃತವಾಗಿದ್ದವು, ಯಾವುವು ಸುರಕ್ಷಿತವಾಗಿದ್ದವು, ಯಾವುವು ಬೀದಿಗಿದ್ದವು, ಇಲ್ಲೆಲ್ಲ ಯಾವ ಜಾತಿಯ, ಯಾವ ವರ್ಗದ ಮಹಿಳೆ ಹೆಚ್ಚು ತಬ್ಬಲಿಯಾಗಿದ್ದಳು ಎನ್ನುವುದನ್ನು ವಿಶ್ಲೇಷಿಸಬೇಕಿದೆ. ಇಂದಿನ 'ಆಧುನಿಕ ಸಂದರ್ಭದಲ್ಲಿ ಪಿತೃಪ್ರಧಾನ ವ್ಯವಸ್ಥೆ, ಊಳಿಗಮಾನ್ಯ ವ್ಯವಸ್ಥೆ ಹೊಸರೂಪಗಳಲ್ಲಿ ತಮ್ಮ ನೆಲೆಗಳನ್ನು ವಿಸ್ತರಿಸಿಕೊಳ್ಳುತ್ತಿವೆ. ಹಿಂದೆಂದಿಗಿಂತಲೂ ಇಂದು, ಮಹಿಳಾ ಸಮುದಾಯಗಳ ಮೇಲೆ ಅದರಲ್ಲೂ ದಲಿತ ಮಹಿಳೆಯರ ಮೇಲೆ ಅಡ್ಡಪರಿಣಾಮಗಳನ್ನು ಬೀರುತ್ತಿವೆ ಎನ್ನುವುದು ಸ್ಪಷ್ಟ ಆದಕ್ಕಾಗಿ ಸ್ತ್ರೀವಾದಿಗಳು ಅತ್ಯಂತ ಎಚ್ಚರ ಹಾಗೂ ಜವಾಬ್ದಾರಿಯಿಂದ ಮಾನಾಡಬೇಕಿದೆ.

ಹಿಂದೊಮ್ಮೆ ನನ್ನೊಂದಿಗೆ ವಾಸವಾಗಿದ್ದ ಕಾಲೇಜು ಉಪನ್ಯಾಸಕಿ ಯಾವುದೋ ಒಂದು ಸಂದರ್ಭದಲ್ಲಿ ವಿಷಾದದಿಂದ ಹೇಳಿದ ಮಾತುಗಳು ನೆನಪಿಗೆ ಬರುತ್ತಿವೆ. "ನನ್ನ ಜಾತಿ ಕೇಳಿದ ತಕ್ಷಣ ನನ್ನೊಂದಿಗೆ ಮಾತನಾಡುವ ಗಂಡಸರ ವರ್ತನೆಗಳು ಕ್ಷಣಾರ್ಧದಲ್ಲಿ ಬದಲಾಗಿ ಬಿಡುತ್ತವೆ. ಸುಲಭವಾಗಿ ನಾನು ಅವರಿಗೆ ಕೈಗೆ ಸಿಕ್ಕಿಬಿಡುವ ಹೆಣ್ಣೆಂದು ನಿರ್ಧರಿಸಿ ಬಿಡುತ್ತಾರೆ. ಸುಶಿಕ್ಷಿತರೆನಿಸಿಕೊಂಡ ರೀತಿಯಲ್ಲಿ ನನ್ನೊಂದಿಗೆ ವರ್ತಿಸುತ್ತಾರೆ." ಉನ್ನತ ಶಿಕ್ಷಣ, ಉನ್ನತ ಹುದ್ದೆಯಲ್ಲಿರುವ ದಲಿತ ಮಹಿಳೆಯ ಸ್ಥಿತಿ ಹೀಗಿರಬೇಕಾದರೆ, ಮೀಸಲಾತಿ ಪಡೆಯದೇ ಜಾತಿಗೊಂಡ ಊಳಿಗಮಾನ್ಯ ಶಾಹಿ ಪಿತೃಪ್ರಧಾನ ವ್ಯವಸ್ಥೆಯಲ್ಲಿರುವ ದಲಿತ ಮಹಿಳೆಯ ಪರಿಸ್ಥಿತಿ ಹೇಗಿರಬೇಡ? ದಲಿತ ಮಹಿಳೆ ತನ್ನ ಜಾತಿಯಲ್ಲಿಯೇ ಇರುವ ಪಿತೃಪ್ರಧಾನ ವ್ಯವಸ್ಥೆಯಿಂದ ಘಾಸಿಗೊಂಡಿದ್ದಾಳೆ. ಅದರ ಜೊತೆಗೆ ಜಾತಿಗೊಂಡ ಊಳಿಗಮಾನ್ಯ ವ್ಯವಸ್ಥೆಯಲ್ಲಿ ಕ್ರೂರವಾಗಿ ನಲುಗಿ ಹೋಗಿದ್ದಾಳೆ. ಕೌಟುಂಬಿಕವಾಗಿ, ಸಾಮಾಜಿಕವಾಗಿ ಭೀಕರ ಹತ್ಯೆಗೊಳಗಾದ ದಲಿತ ಮಹಿಳೆಯ ವೇದನೆಗೂ, ಹೆಣ್ಣಾದ ಕಾರಣಕ್ಕೆ ನನಗೆ ಬಡ್ತಿ ಸಿಗುತ್ತಿಲ್ಲ, ನನ್ನ ಪ್ರತಿಭೆಯನ್ನು ಗೌರವಿಸುತ್ತಿಲ್ಲ ಎನ್ನುವ ಮೇಲ್ಜಾತಿಯ ಮಹಿಳೆಯ ವೇದನೆಗೂ ಅಜಗಜಾಂತರ ವ್ಯತ್ಯಾಸವಿದೆ.

ಸಮಾಜದ ಜಾತಿ ಶ್ರೇಣಿಕರಣದಲ್ಲಿ ದಲಿತ ಮಹಿಳೆಯರು ಮೇಲ್ಜಾತಿಯ, ಮೇಲ್ವರ್ಗದ ಪುರುಷರಿಂದ ಶೋಷಣೆಗೆ ಒಳಗಾಗಿದ್ದಾರೆ, ಒಳಗಾಗುತ್ತಿದ್ದಾರೆ. ಪಾತರದವರು, ಜೋಗತಿಯರು, ಬಸವಿಯರು, ಬಾಲಬಸವಿಯರು ಈ ಮೊದಲಾದ ಶೂದ್ರ ಹಾಗೂ ದಲಿತ ಮಹಿಳೆಯರ ಸಾಂಸ್ಕೃತಿಕ ಕಥನಗಳು ಇದನ್ನೇ ವಾಚ್ಯಗೊಳಿಸುತ್ತವೆ. ಪಾತರ, ಜೋಗತಿ, ಬಸವಿ ಬಿಡುವ ಆಚರಣೆಯ ಹೆಸರಿನಲ್ಲಿ ಪ್ರತಿವರ್ಷ ಎನಿಲ್ಲೆಂದರೂ 500ರಿಂದ 1000ದವರೆಗೆ ದಲಿತ ಹುಡುಗಿಯರು ಲೈಂಗಿಕ ಮಾರುಕಟ್ಟೆಗೆ ತಳ್ಳಲ್ಪಡುತ್ತಿದ್ದಾರೆ. ಇದರ ಮೇಲೆ, ಕೆಳಜಾತಿಯಲ್ಲಿ ಹುಟ್ಟಿದ್ದ ಕಾರಣಕ್ಕಾಗಿಯೇ ಅನೇಕ ಕನ್ಯೆಯರು, ಮಹಿಳೆಯರು, ಮೇಲ್ಜಾತಿಯ, ಮೇಲ್ವರ್ಗದ ಪುರುಷರಿಂದ ಅತ್ಯಾಚಾರಕ್ಕೆ ಒಳಗಾಗುತ್ತಿದ್ದಾರೆ, ಬೆತ್ತಲೆಯಾಗಿ ಮೆರವಣಿಗೆಯಾಗುತ್ತಿದ್ದಾರೆ. ಈ ಬಗೆಯ ಘಟನೆಗಳು ನಮ್ಮ ವೃತ್ತಪತ್ರಿಕೆಗಳಲ್ಲಿ ಪ್ರತಿನಿತ್ಯ ಬರುತ್ತಲೇ ಇರುತ್ತವೆ. ಜಾತಿ ಕಾರಣದಿಂದಲೇ ಸುರಕ್ಷಿತವಾಗಿರುವ ಮೇಲ್ವರ್ಗದ, ಮೇಲ್ಜಾತಿಯ ಮಹಿಳೆಯರಿಗೆ, ದಲಿತ ಮಹಿಳೆಯರು ಅನುಭವಿಸುವ ಈ ಬಗೆಯ ಅಪಮಾನ, ಕಿರುಕುಳ, ನೋವು, ಹಿಂಸೆಗಳು ಅರ್ಥವಾಗುವುದಿಲ್ಲ, ಮೇಲ್ಜಾತಿಯ ಮಹಿಳೆಯರಿಗೆ ವೈಧವ್ಯ, ಗೃಹಬಂಧನವೇ ತೀವ್ರ ಸಮಸ್ಯೆಗಳಾಗಿ ಕಾಡುತ್ತವೆ. ಹಾಗೆಂದು ಮೇಲ್ಜಾತಿಯ ಮಹಿಳೆಯರ ಸಮಸ್ಯೆಗಳನ್ನು ಸರಳೀಕರಣ ಗೊಳಿಸುತ್ತಿದ್ದೇನೆಂದಲ್ಲ. ಮೊದಲು, ನಮಗಿಂತಲೂ ನೊಂದವರ ನೋವನ್ನು ಕೇಳಬೇಕಿದೆ. ಅವರ ಸಮಸ್ಯೆಗಳನ್ನು ಆಲಿಸುವ ಅಗತ್ಯವಿದೆ. ಸಮಾಜದಲ್ಲಿ, ಸಮುದಾಯಗಳಲ್ಲಿ ಇದ್ದುಕೊಂಡು ತಬ್ಬಲಿತನವನ್ನೂ ಅನುಭವಿಸುತ್ತಿರುವ ದಲಿತ ಮಹಿಳೆಯರ ಅಧ್ಯಯನ ನಡೆಯಬೇಕಿದೆ.

ಭಾರತೀಯ ಸ್ತ್ರೀವಾದಕ್ಕೆ ಏಕರೂಪವಿಲ್ಲ. ಇದರೊಳಗೆ ಬೇರೆ ಬೇರೆ ಜಾತಿಗಳ ಬೇರೆ ಬೇರೆ ಮಾದರಿಗಳಿವೆ. ಸಮಗ್ರವಾಗಿ ಹೆಣ್ಣು ಭಾರತದ ಪುರುಷಶಾಹಿ ವ್ಯವಸ್ಥೆಯಲ್ಲಿ ಒಂದೇ ಬಗೆಯಾಗಿ ತುಳಿತಕ್ಕೆ ಒಳಪಟ್ಟಿದ್ದರೂ ಕೂಡ

ವರ್ಣಾಶ್ರಮದ ಕಾರಣವಾಗಿ ಮಹಿಳೆಯ ಮೇಲಿನ ಶೋಷಣೆಯ ನೆಲೆಗಳು ಅತ್ಯಂತ ಸಂಕೀರ್ಣವಾಗಿ ವ್ಯಾಪಿಸಿವೆ. ಈ ಶೋಷಣೆಯ ಸಂಕೀರ್ಣತೆಯನ್ನು ತಲಸ್ಪರ್ಶಿಯಾಗಿ ಶೋಧಿಸಬೇಕಾದರೆ, ಜಾತಿಪ್ರಣೀತವಾದ ಒಂದೊಂದು ಗುಂಪುಗಳನ್ನು ಭಿನ್ನವಾಗಿ ಪರಿಶೀಲಿಸಬೇಕಾಗುತ್ತದೆ. ಪಶ್ಚಿಮದಲ್ಲಿ ಕಪ್ಪು ಮತ್ತು ಬಿಳಿ ಮಹಿಳೆಯರ ಶೋಷಣೆಯ ಅಂತರವನ್ನು ಗುರುತಿಸಿಕೊಂಡಂತೆಯೇ ಜಾತಿನಿಷ್ಠವಾದ ಭಾರತದಲ್ಲಿ ವೈದಿಕ ಮಹಿಳಾಕಥನ, ಹಾಗೇ ಶೂದ್ರ ಮಹಿಳಾ ಕಥನ, ಮುಸ್ಲಿಂ ಮಹಿಳಾ ಕಥನ, ಕ್ರಿಶ್ಚಿಯನ್ ಮಹಿಳಾ ಕಥನ ಹಾಗೂ ದಲಿತ ಮಹಿಳಾ ಕಥನ ಎಂದು ಪ್ರತ್ಯೇಕ ಪ್ರತ್ಯೇಕವಾಗಿ ಅಧ್ಯಯನ ಮಾಡಬೇಕಾದ ಜರೂರಿದೆ. ಈ ಪ್ರತ್ಯೇಕತೆ ವೈದಿಕ ಮಹಿಳಾ ಕಥನಕ್ಕೆ ವಿರುದ್ಧವಾದುದಲ್ಲ. ದಲಿತ ಮಹಿಳೆಯರ ಸಮಸ್ಯೆಗಳನ್ನು ವೈದಿಕ ಮಹಿಳೆಯ ಸಮಸ್ಯೆಗಳ ಜೊತೆಗೂಡಿಸಿ ಸಾಮಾಜಿಕ ನ್ಯಾಯವನ್ನು ಹುಡುಕುವುದಕ್ಕೆ, ಪ್ರತಿಪಾದಿಸುವುದಕ್ಕೆ ಬರುವುದಿಲ್ಲ. ಹೇಗೆ ಒಬ್ಬ ಜೋಗತಿ, ಬಸವಿಯ ಸಾಮಾಜಿಕ, ಧಾರ್ಮಿಕ ಶೋಷಣೆಗಳು ಭಿನ್ನವೊ, ಹಾಗೆ ಮಹಿಳೆಯರ ಸಾಮಾಜಿಕ ಧಾರ್ಮಿಕ ಶೋಷಣೆಗಳು ಕೂಡ ಸೂಕ್ಷ್ಮವಾಗಿ ಬೇರೆ ಬೇರೆಯಾಗಿರುತ್ತವೆ. ಅಂದರೆ ಶೋಷಣೆಯ ಕೇಂದ್ರ ಒಬ್ಬೊಬ್ಬರಿಗೂ ಒಂದೊಂದು ಬಗೆಯ ತಾರತಮ್ಯವನ್ನು ಹಿಂಸೆಯನ್ನು ಸೃಷ್ಟಿಸಿರುತ್ತದೆ. "ಜಾತಿಗೊಂಡ ಪಿತೃಪ್ರಧಾನ ಅಧಿಕಾರ ಸಂಬಂಧಗಳ ಒಳಗಿನ ವಿಭಿನ್ನ ನೆಲೆಗಳನ್ನು ಆಧರಿಸಿ, ನಮ್ಮ ವಿಭಿನ್ನ ಶೋಷಿತ ಸ್ಥಾನಗಳು ರೂಪಿತಗೊಂಡಿರುತ್ತವೆ. ಈ ಒಂದು ಸಂರಚನೆಯಲ್ಲಿ ನಾವು ಕೇವಲ ಮಹಿಳೆಯರಾಗಿರುವುದಿಲ್ಲ. ಬದಲಿಗೆ ಜಾಡುಮಾಲಿ ಮಹಿಳೆಯಾಗಿ, ರೈತಾಪಿ ಮಹಿಳೆಯಾಗಿ, ವೃತ್ತಿ ಮಹಿಳೆಯಾಗಿ ಅಸ್ತಿತ್ವದಲ್ಲಿರುತ್ತೇವೆ. ಈ ಪ್ರತಿಯೊಂದು ವಿವರಣೆಯೂ ನಮ್ಮ ಸಾಮಾಜಿಕ ಸ್ಥಿತಿಗಳ ನಿರ್ದಿಷ್ಟತೆಯನ್ನು ಸೂಚಿಸುತ್ತದೆ. ಈ ಆಯಾಮಗಳು ಸಂಕೀರ್ಣ ರೀತಿಯಲ್ಲಿ ಒತ್ತರಿಸಿ ಆ ಮೂಲಕ ನಮ್ಮ ನಿಜದನಿಗಳನ್ನು ಪೃಥಕ್ಕರಿಸುತ್ತದೆ". (Alisamma women's collective : 2000, Pp. 45)

ಹಿಂದೆಂದಿಗಿಂತಲೂ ಇವತ್ತು ಭಾರತೀಯ ಸಂಸ್ಕೃತಿಗಳಿಗೆ ಏಕರೂಪವನ್ನು ನೀಡುವ ಪ್ರಯತ್ನ ತೀವ್ರವಾಗಿ ನಡೆದಿದೆ. ಬಲಪಂಥಿಯರ ಈ ಧೋರಣೆಗಳಿಂದಾಗಿ ಮಹಿಳೆಯರು ಅದರಲ್ಲೂ ದಲಿತ ಮಹಿಳೆಯರು ನೇರವಾಗಿ ಪ್ರಪಾತಕ್ಕೆ ಬೀಳುವ ಅಪಾಯವಿದ್ದುದರಿಂದ ನಿರ್ಲಕ್ಷಿತ ಮಹಿಳಾ ಸಮುದಾಯಗಳ ಅಧ್ಯಯನವನ್ನು ಅತ್ಯಂತ ಎಚ್ಚರಿಕೆಯಿಂದ ಮಾಡಬೇಕಿದೆ. ಹಾಗೂ ಅವರಲ್ಲಿ ಜಾಗೃತಿಯನ್ನು ಮೂಡಿಸಬೇಕಿದೆ.

★

Statement about Ownership and other Particulars about Newspaper ACHALA

Form IV (See Rule 8)

1. Place of Publication	:	Bangalore, Karnataka
2. Periodicity of Publication	:	Monthly
3. Printer's Name, Address	:	Lipi Mudrana Gandhibazar, Basavanagudi, B'lore-4
4. Publisher's Name	:	Dr. G. Ramakrishna, For Jagruthi Mahila Adhyayana Kendra, Bangalore
Nationality	:	Indian
Address	:	108, Skyline Surabhi, Vidyapeeta Road, B.S.K. III Stage Bangalore - 560 085
5. Editor's Name	:	Dr. N. Gayathri
Nationality	:	Indian
Address	:	108, Skyline Surabhi, Vidyapeeta Road, B.S.K. III Stage Bangalore - 560 085
6. Name and Address of Individuals who own the Newspaper	:	Jagruthi Mahila Adhyayana Kendra 108, Skyline Surabhi, Vidyapeeta Road, B.S.K. III Stage Bangalore - 560 085

I, G. Ramakrishna hereby declare that the particulars given above are true to the best of my knowledge and belief.

Bangalore
Date : 25-3-2004

Sd/-
G. Ramakrishna

ವೇಶ್ಯೆಯರು ಮತ್ತು ಕಾನೂನು ಸಮರ

- ಶಾಂತಾ ನಾಗರಾಜ್

ಯಾವ ದೇಶದ ಸರ್ಕಾರಕ್ಕೆ ಆರ್ಥಿಕ ಸಂಪನ್ಮೂಲ ವೇಶ್ಯೆಯರ ಗಳಿಕೆಯನ್ನು ಅವಲಂಭಿಸಿರುತ್ತದೋ, ಯಾವ ದೇಶಕ್ಕೆ ವೇಶ್ಯೆಯರ ಸಲುವಾಗಿಯೇ ಪ್ರಪಂಚದ ನಾನಾ ಕಡೆಗಳಿಂದ ಹತ್ತು ಮಿಲಿಯನ್ ಪ್ರವಾಸಿಗಳು ಆಗಮಿಸುತ್ತಾರೋ ಆ ದೇಶದ ಆಡಳಿತ ವ್ಯವಹಾರದಲ್ಲಿ ವೇಶ್ಯೆಯರ ಗಟ್ಟಿಧ್ವನಿಯೂ ಇರುತ್ತದೆ ಎನ್ನುವುದನ್ನು ಥೈಲ್ಯಾಂಡ್ ವೇಶ್ಯೆಯರು ಸಿದ್ಧಪಡಿಸಿ ತೋರಿಸಿದ್ದಾರೆ. ಸಾಂಪ್ರದಾಯಿಕ ಸಮಾಜಕ್ಕೆ ವೇಶ್ಯೆಯೆನ್ನುವ ಪದವೇ ಮುಜುಗರವನ್ನು ತರಬಹುದು. ಆದರೆ ಈ ಭೂಮಂಡಲದಲ್ಲಿ ಎಲ್ಲೆಲ್ಲಿ ಮನುಷ್ಯ ವಾಸಿಸಿದ್ದಾನೋ ಅಲ್ಲೆಲ್ಲಾ ವೇಶ್ಯಾವಾಟಿಕೆಯು ಅತ್ಯಂತ ಪ್ರಾಚೀನ ಕಾಲದಿಂದಲೂ ಇದೆಯೆನ್ನುವುದೂ ಸುಳ್ಳಲ್ಲ. ಈ ವ್ಯವಸ್ಥೆಯನ್ನು ಜಾಹೀರುಪಡಿಸಿಕೊಂಡು ತಮ್ಮನ್ನು ತಾವು ಸೆಕ್ಸ್‌ವರ್ಕರ್ಸ್ ಎಂದು ಕರೆದುಕೊಳ್ಳುತ್ತಾ ತಾವೂ ಸರ್ಕಾರಕ್ಕೆ ಸಾಕಷ್ಟು ಟ್ಯಾಕ್ಸ್ ಕಟ್ಟಿರುವುದರಿಂದ ತಮ್ಮ ಬೇಡಿಕೆಗಳಿಗೂ ಮನ್ನಣೆಕೊಡಬೇಕೆಂದು ಮತ್ತು ಸರ್ಕಾರ ತಮಗೆ ಸಂಬಂಧಪಟ್ಟ ಹೊಸ ಕಾನೂನನ್ನು ರೂಪಿಸುವಾಗ ತಮ್ಮ ಅಭಿಪ್ರಾಯವೂ ಬಹಳ ಮುಖ್ಯವೆಂಬುದು ಥಾಯ್ ವೇಶ್ಯೆಯರ ಅಭಿಪ್ರಾಯ.

ಥಾಯ್‌ಲ್ಯಾಂಡ್‌ನಲ್ಲಿ ಕಡೆಯ ಪಕ್ಷ ಇಪ್ಪತ್ತೈದು ಲಕ್ಷ ಮಹಿಳೆಯರು ವೇಶ್ಯ ಉದ್ಯೋಗವನ್ನು ಅವಲಂಭಿಸಿದ್ದಾರೆ. ಈ ಪ್ರತಿಯೊಬ್ಬರು ತಮ್ಮ ಮನೆಯ ಹತ್ತು ಸದಸ್ಯರನ್ನು ಸಾಕುತ್ತಿದ್ದಾರೆ ಎಂದು ವೇಶ್ಯೆಯರ ಸಂಘದ ಪರವಾಗಿ ವಾದ ಮಾಡುವ ಅಧಿಕೃತ ನ್ಯಾಯವಾದಿಗಳು ಹೇಳುತ್ತಾರೆ. ಈ ವೇಶ್ಯೆಯರ ಬಗ್ಗೆಯೇ ಸಂಶೋಧನೆ ಮಾಡಿರುವ ಹಲವಾರು ಮಂದಿ ತಮ್ಮ ಪ್ರಬಂಧಗಳಲ್ಲಿ ನೀಡಿರುವ ಅಂಕಿಅಂಶಗಳು ಹೀಗಿವೆ : 'ಈ ಸೆಕ್ಸ್ ಟ್ರೇಡ್‌ನಲ್ಲಿ ವರ್ಷಕ್ಕೆ ಟರ್ನ್‌ಓವರ್ ಆಗುವ ಹಣ ನಲವತ್ತರಿಂದ ಐವತ್ತು ಬಿಲಿಯನ್ ಬಾತ್ (ಥಾಯ್ ಕರೆನ್ಸಿ). ಇದರಿಂದ ಅಪಾರ ಹಣ ತೆರಿಗೆಯ ರೂಪದಲ್ಲಿ ಸರ್ಕಾರದ ಬೊಕ್ಕಸ ಸೇರುತ್ತದೆ. ಆದ್ದರಿಂದಲೇ ಈ ವ್ಯವಸ್ಥೆ 'ಸೆಕ್ಸ್ ಟ್ರೇಡ್' ಎಂದು ಕರೆಸಿಕೊಳ್ಳುತ್ತದೆ.

ಕಳೆದ ವರ್ಷ ನವೆಂಬರ್‌ನಲ್ಲಿ ಇದ್ದಕ್ಕಿದ್ದಂತೆಯೇ ಥಾಯ್ ಸರ್ಕಾರಕ್ಕೆ ವೇಶ್ಯಾವಾಟಿಕೆಯ ಸರಿಯಾದ ಲೆಕ್ಕಸರ್ಕಾರಕ್ಕೆ ಸಿಗುತ್ತಿಲ್ಲ, ವೇಶ್ಯೆಯರು ತೆರಿಗೆಯನ್ನು ಸರಿಯಾದ ರೂಪದಲ್ಲಿ ಕಟ್ಟುತ್ತಿಲ್ಲ; ಅದರಿಂದ ಈ ವ್ಯವಸ್ಥೆಯನ್ನು ಕಾನೂನು ಬದ್ಧಗೊಳಿಸಬೇಕು. ಎನ್ನುವ ವಿಚಾರ ಬಂದು, ಇದಕ್ಕೆ ಪೂರ್ವಭಾವಿಯಾಗಿ ಒಂದು ವೇದಿಕೆಯನ್ನು ನಿರ್ಮಿಸಿ ನ್ಯಾಯಾಂಗದ ಮಂತ್ರಿಯ ಸಮ್ಮುಖದಲ್ಲಿ ಒಂದು ಚರ್ಚೆಯನ್ನು ಏರ್ಪಡಿಸಿತು. ಈ ಚರ್ಚೆಯಲ್ಲಿ ಹಲವಾರು ಗಣ್ಯರು, ಮಾಧ್ಯಮದ ಜನಗಳು, ವಿಶ್ವವಿದ್ಯಾಲಯದ ಮಹಿಳಾ ಅಧ್ಯಯನ ವಿಭಾಗ, ನ್ಯಾಯವಾದಿಗಳು ಮತ್ತು ನೂರಾರು ವೇಶ್ಯೆಯರು ಭಾಗವಹಿಸಿದ್ದರು.

> *'ಅಚಲ' ಸಂಪಾದಕ ಬಳಗದ ಶ್ರೀಮತಿ ಶಾಂತಾ ನಾಗರಾಜ್ ಇತ್ತೀಚೆಗೆ ಥಾಯ್‌ಲ್ಯಾಂಡ್‌ಗೆ ಭೇಟಿ ನೀಡಿದ್ದರು. ಆ ಸಂದರ್ಭದಲ್ಲಿ ವೇಶ್ಯೆಯರನ್ನು ಕುರಿತಂತೆ ಥಾಯ್ ಸರ್ಕಾರ ನಡೆಸಿದ ಚರ್ಚೆಯ ಸಾರಾಂಶವನ್ನು ಶಾಂತಾವರು ಈ ಲೇಖನದಲ್ಲಿ ದೊರಕಿಸಿಕೊಟ್ಟಿದ್ದಾರೆ.*

ದೇಶ ಎಷ್ಟೋ ಆಧುನಿಕವಾಗಿರಲಿ, ಅದರ ವ್ಯವಸ್ಥೆಯಲ್ಲಿ ಶೋಷಿತರು, ಶೋಷಣೆ ಮಾಡುವವರು ಇದ್ದೇ ಇರುತ್ತಾರೆ. ಥಾಯ್‌ಲ್ಯಾಂಡ್ ಕೂಡ ಅದಕ್ಕೆ ಹೊರತಲ್ಲ, ಸರ್ಕಾರದ ಈ ಹೊಸ ಕಾನೂನಿನ ಪ್ರಸ್ತಾಪ ಕೆಲವರಿಗೆ ತುಂಬ ಖುಷಿ ತಂದಿತು. ಏಕೆಂದರೆ ಅವರೆಲ್ಲ ಬಾರ್‌ನ ಮಾಲೀಕರು, ಮಸಾಜ್‌ಪಾರ್ಲರ್‌ನ ಮಾಲೀಕರೂ ಆಗಿದ್ದರು. ಅವರಿಗೆ ಈ ಹೊಸ ಕಾನೂನು ವರವಾಗಿಯೇ ಪರಿಣಮಿಸುತ್ತದೆ. ಕಾನೂನಿನ ನೆಪವೊಡ್ಡಿ ಹುಡುಗಿಯರನ್ನು ಗಂಟೆಗಟ್ಟಲೆ ದುಡಿಸಿಕೊಳ್ಳಬಹುದು ಮತ್ತು ಅವರ ಮೇಲೆ ಹತೋಟಿಯನ್ನು ಹೊಂದಬಹುದು. ಆದರೆ ಅರವತ್ತಮೂರು ಮಿಲಿಯನ್ ಜನಸಂಖ್ಯೆಯಿರುವ ಈ ನಾಡಿನಲ್ಲಿ ವೇಶ್ಯೆಯರ ಪರವಾಗಿ ಚಿಂತಿಸುವ, ಕೆಲಸ ಮಾಡುವ ಜನರಿದ್ದಾರೆ. ಈ ದೇಶದಲ್ಲಿ ಏಡ್ಸ್‌ರೋಗವನ್ನು ಹತೋಟಿಗೆ ತರಲು ಶ್ರಮಿಸಿದ ಮತ್ತು ಪಾಶ್ಚಾತ್ಯ ಪ್ರವಾಸಿಗರನ್ನು ಕಾಂಡೋಂ ಬಳಕೆಗೆ ಕಡ್ಡಾಯಗೊಳಿಸಿದ ಮಿಸ್ಟರ್ ಮಿಚಾಯಿಲ್ ಈಗಲೂ ಸಹ ಈ ಚರ್ಚೆಯಲ್ಲಿ ಪಾಲ್ಗೊಂಡು ಇದರ ಸಾಧಕ ಬಾಧಕಗಳ ಬಗ್ಗೆ ಚರ್ಚಿಸಿದರು.

ಈ ಚರ್ಚೆಯ ಒಟ್ಟು ಧ್ವನಿ ಈ ಕಾನೂನಿನ ವಿರುದ್ಧವಾಗಿದ್ದು, ಚಿಯಾಂಗ್‌ನುಯಿ ವಿಶ್ವವಿದ್ಯಾಲಯದ ಮಹಿಳಾ ಅಧ್ಯಯನ ವಿಭಾಗದ ಶ್ರೀಮತಿ ವೀರದ ಸೋಂಸವಸ್ಥಿಯವರಂತೂ ಸರ್ಕಾರಕ್ಕೆ ದೊಡ್ಡ ಎಚ್ಚರಿಕೆಯನ್ನೇ ಕೊಟ್ಟರು. "ನೀವು ಹೀಗೆ ಇದನ್ನು ಕಾನೂನುಗೊಳಿಸಿಬಿಟ್ಟರೆ ಮನುಷ್ಯರನ್ನು ವ್ಯಾಪಾರ ಮಾಡುತ್ತಿರುವ ದುಷ್ಟ ಶಕ್ತಿಗಳ ಕೈಗೆ ದೊಡ್ಡ ದೊಡ್ಡ ಉಡುಗೊರೆಯನ್ನೇ ನೀಡಿದಂತಾಗಿಬಿಡುತ್ತದೆ"

CPMG/KA/BG-8/2003-05 RNI No. 45577/88

Posted at Basavanagudi P.O. On the 25th of every Month

ಎನ್ನುವ ವಾದ ಅವರದು. ಕೆಲವು ಅಕಾಡೆಮಿಗಳ ಸದಸ್ಯರು ಮತ್ತು ವೇಶ್ಯಾ ಸಂಘದ ಸದಸ್ಯರ ಅಭಿಪ್ರಾಯವೇನೆಂದರೆ 'ಜನನ ಪ್ರಮಾಣದ ಸುಳ್ಳು ಕಾಗದ ಪತ್ರಗಳನ್ನು ಸೃಷ್ಟಿಸಿ ಅಪ್ರಬುದ್ಧ ಬಾಲಕಿಯರನ್ನೂ ಈ ದಂಧೆಗೆ ಹೆಚ್ಚು ಹೆಚ್ಚು ತಳ್ಳಿ ಬಿಡುವ ಸಾಧ್ಯತೆ ಇದರಲ್ಲಿ ಇದೆ' ಎನ್ನುವುದು.

ಆ ಚರ್ಚೆಯಲ್ಲಿ ಭಾಗವಹಿಸಿದ ವೇಶ್ಯೆಯರ ಬೇಡಿಕೆ ಬೇರೆಯದೇ ಆಗಿತ್ತು. ''ನಮಗೆ ನಿಮ್ಮ ಕಾನೂನಿನ ರಕ್ಷೆಯೇನೂ ಬೇಕಾಗಿಲ್ಲ, ನಮಗೆ ನಮ್ಮದೇ ಆದ ಸಮಸ್ಯೆಗಳು ಬೇಕಾದಷ್ಟಿದೆ. ಅದನ್ನು ಮೊದಲು ನೇರಗೊಳಿಸಿ. ನಾವು ಬಾರ್‌ಗಳ ಮತ್ತು ಮಸಾಜ್ ಪಾರ್ಲರ್‌ಗಳ ಮುಖಾಂತರ ಬೇಕಾದಷ್ಟು ತೆರಿಗೆ ಕಟ್ಟಿದ್ದೇವೆ. ಅದಕ್ಕೆ ನಮಗೆ ಸರಿಯಾದ ರಿಟರ್ನ್ಸ್ ಸಿಗುತ್ತಿಲ್ಲ. ಬೇರೆ ವ್ಯಾಪಾರದ ಉದ್ದಿಮೆದಾರರಿಗೆ ಸಕಲ ಸವಲತ್ತುಗಳನ್ನೂ ಒದಗಿಸಿಕೊಡುತ್ತೀರಿ. ನಮಗೆ ಮಾತ್ರ ಯಾವ ಸೌಕರ್ಯವೂ ಇಲ್ಲ. ಹೀಗೇಕೆ? ನಮ್ಮ ಒಟ್ಟು ವ್ಯವಸ್ಥೆಯನ್ನು ಇನ್ನಷ್ಟು ಸುಭದ್ರಗೊಳಿಸಿ, ನಾವು ಕಟ್ಟುವ ತೆರಿಗೆಯ ಸಲುವಾಗಿಯಾದರೂ ನಮಗೆ ನ್ಯಾಯ ದೊರಕಿಸಿ''.

ಈ ಮಹಿಳೆಯರ ವಾದ ವೈಖರಿಗೆ ಆ ಸಭೆಯಲ್ಲಿ ಭಾಗವಹಿಸಿದ್ದ ಕಾನೂನು ಮಂತ್ರಿ ಮಹೋದಯರಾದ ಶ್ಯಫಾಂಗ್‌ತಪ್ ತೆಂಕಜನ ಕಕ್ಕಾಬಿಕ್ಕಿಯಾಗಿ ಬಿಟ್ಟರು. ''ಇಲ್ಲ ಇಲ್ಲ, ಈ ತಕ್ಷಣಕ್ಕೆ ಈ ಕಾನೂನನ್ನು ತರುವ ಅಜೆಂಡಾ ಸರ್ಕಾರದ ಮುಂದಿಲ್ಲ. ಈ ಚರ್ಚೆಯನ್ನು ಏರ್ಪಡಿಸಿದ್ದೇಕೆಂದರೆ ಈ ಇಂಡಸ್ಟ್ರಿಯ ಬಗ್ಗೆ ಸಾರ್ವಜನಿಕರ ಅಭಿಪ್ರಾಯವನ್ನು ತಿಳಿದುಕೊಳ್ಳಲು ಮಾತ್ರ'' ಎನ್ನುವ ಸಬೂಬನ್ನು ಹೇಳಿ ಆ ಚರ್ಚೆಯನ್ನು ಮುಗಿಸಿದರು.

ಪ್ರವಾಸಿಗರನ್ನು ಆಕರ್ಷಿಸುವ ಹುಚ್ಚು ಪ್ರಯತ್ನದಲ್ಲಿ ವೇಶ್ಯಾವಾಟಿಕೆಯನ್ನು ಪ್ರೋತ್ಸಾಹಿಸಿದ್ದು ಸರ್ಕಾರವೇ. ಈಗ ಅದೇ ಸರ್ಕಾರ ಈ ವ್ಯವಸ್ಥೆಯ ಇಕ್ಕಳದಲ್ಲಿ ಸಿಕ್ಕು ಬಿಡಿಸಿಕೊಳ್ಳಲಾರದಂತೆ ಒದ್ದಾಡುತ್ತಿದೆ. ಏನಾದರಾಗಲಿ ಬ್ಯಾಂಕ್‌ಕಾಕ್‌ನ ಬೀದಿ ಬೀದಿಗಳಲ್ಲಿ ಅರವತ್ತು, ಎಪ್ಪತ್ತು ವಯಸ್ಸಿನ ಮುದಿ ಪಾಶ್ಚಾತ್ಯರ ಕೈಯಲ್ಲಿ ಹದಿನಾರು ಹದಿನೆಂಟು ವಯಸ್ಸಿನ ಥಾಯ್ ಹುಡುಗಿಯರು ಕೈ, ಕೈ ಹಾಕಿ ನಡೆಯುತ್ತಿರುವುದನ್ನು ನೋಡಿದಾಗ ನಿಜಕ್ಕೂ ಕರುಳು 'ಚುರ್' ಎನ್ನುತ್ತದೆ. ಮನುಷ್ಯನ ಕಾಮ ಪಿಪಾಸೆಯ ಬಗ್ಗೆ ಅಸಹ್ಯ ಹುಟ್ಟುತ್ತದೆ.

★

"Achala" 108, Skyline Surabhi,
14 - P , Vidyapeeta Road,
BSK III Stage,
Bangalore - 560 085

To :

Smt/Sri